

ಕಲ್ಯಾಣ ಕಿರಣ



ಜೂನ್-2012 ಬೆಲೆ : 20



ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮೀಜಿಯವರಿಂದ ಪೀಠಾರೋಹಣ



ಪೀಠಾರೋಹಣಕ್ಕೆ ಮೊದಲು ಪೂಜ್ಯ ಸ್ವಾಮೀಜಿಯರಿಂದ ಪೂಜ್ಯ ಮಾತಾಜಿಯವರ ಪಾದಪೂಜೆ



ಕುಮಾರಿ ನಿಸರ್ಗಾ ನಾಗರಾಜ್ ಅವರಿಂದ ನೃತ್ಯ



ಕುಮಾರಿ ಬಸವಶ್ರೀ ವೀರೇಶ್ ಅವರಿಂದ ನೃತ್ಯ



ಶರಣ ರಾಜಶೇಖರ್‌ಗೆ ಸತ್ಕಾರ



ಕುಮಾರಿ ಚೈತ್ರಾ ದಾಸೇಗೌಡ ಅವರಿಂದ ನೃತ್ಯ

- ॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥
866666

ಸಂಪುಟ-42	ಬಸವ ಶಕೆ -879	ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-06	ಜೂನ್- 2012	ವಾರ್ಷಿಕ ಚಂದಾ 200 ರೂ.

ಮಂಗಳಾಂಗ ಗುರು ಲಿಂಗಾನಂದರು

ಮಂಗಳಾಂಗ ಗುರು ಲಿಂಗಾನಂದರೆ, ಮಾಯವಾದಿರೆಲ್ಲಿ?
ವಿಶ್ವಚೇತನವೆ ಲೀನವಾದಿರಾ, ಲಿಂಗದೇವನಲ್ಲಿ।
ವಿಶ್ವಧರ್ಮದ ವಿಸ್ತಾರ ತಿಳಿಸಿ, ಮಾನವೀಯತೆಗೆ ಮಹತ್ವ ಕೊಡಿಸಿ
ಬಸವ ಧರ್ಮದ ಪ್ರಣತೆಯುರಿಗೆ, ತವ ತಪದ ತೈಲ ಸುರಿಸಿ ॥ 1 ॥

ಸತ್ಯ ಶರಣ ಸಂದೇಶವನ್ನು, ಈ ಜಗದಿ ಬಿತ್ತಿ ಬೆಳೆಸಿ
ಉತ್ತುಂಗಕ್ಕೇರಿಸಿದೆ ಬಸವ ಧರ್ಮ ಕಳೆ ಕಿತ್ತು ಹಸನುಗೊಳಿಸಿ
ಜಂಗಮತ್ವವನು ಅಂಗವಿಸಿ ಲಿಂಗದ ನಿಜವ ತಿಳಿಸಿ
ಲಿಂಗಾಂಗ ಸಮರಸದ ಸಿಹಿಜೇನು ಬಡಭಕ್ತ ಜನಕೆ ಉಣಿಸಿ ॥ 2 ॥

ಬಸವನುಸಿರು ಜಗದೊಳಗೆ ಹರಿಸಿ ಜನರ ಜಾಗೃತಿಗೊಳಿಸಿ
ಹರಿದು ಹಂಚಿದ ಧರ್ಮ ಶಕ್ತಿಯ ಹೊಸೆದು ಹುರಿಗೊಳಿಸಿ
ಬಸವಣ್ಣರೈಕ್ಯ ಕೂಡಲಸಂಗಮದ ಧರ್ಮಕ್ಷೇತ್ರದಲ್ಲಿ
ಒಂದುಗೂಡಿಸಿದೆ ಬಸವ ಭಕ್ತರನು ಶರಣ ಮೇಳದಲ್ಲಿ ॥ 3 ॥

ಬಸವ ಸಂದೇಶಕೆ ಚ್ಯುತಿಯ ತರುವ ಮಠಗಳಿಗೆ ದಿಟದಿ ನುಡಿದೆ
ಜಾತಿನಂಬಿಕೆಯ ಭೂತಬಿಡಿಸಿ ನಿಜ ನೀತಿ ಜ್ಯೋತಿಯಾದೆ।
ಸ್ತುತಿನಿಂದೆ ಏನೊಂದು ಬರಲಿ ನೆಲೆಸಿತ್ತು ನಗೆಯು ಮೊಗದಿ
ಧರ್ಮದ ಮಮತೆ ಎದೆ ತುಂಬ ಇತ್ತು ಅದನಾವಬಲ್ಲ ಜಗದಿ? ॥ 4 ॥

ನಡೆನುಡಿಗಳಲ್ಲಿ ಹುದುಗಿತ್ತು ಸರ್ವಧರ್ಮ ಸಮತೆ ಪ್ರೀತಿ
ಹೃದಯಾಂತರಾಳದಲ್ಲಿ ಮಿಡಿಯುತ್ತಿತ್ತು ಜಗಕೆ ಬಯಸಿ ಶಾಂತಿ ।
ಅಂದು ಬಂದ ಹಿರಿಯೂರಿನಿಂದ ಬರಸಿಡಿಲಿನಂಥ ಸುದ್ದಿ
ಕೇಳಿದೊಡನೆ ಒಗೆದಂತೆ ಆಯ್ತು ಕುದಿ ಸುಣ್ಣದೊಳಗೆ ಎದ್ದಿ ॥ 5 ॥

ಇನ್ನೆಲ್ಲಿ ದೊರೆಯಬಹುದಯ್ಯಾ ನಿಮ್ಮ ಆ ದಿವ್ಯ ಮೊಗದ ಕಾಂತಿ?
ಇನ್ನಾರು ತಿಳಿಸಬಹುದಯ್ಯಾ ಗುರುವೆ, ನಿರ್ಭಯದ ಧರ್ಮ ಕ್ರಾಂತಿ?!
ಗುರುವೆ ಬಾರೋ ಜಗದೊರವೆ ಬಾರೊ ನಾ ಕರೆವೆ ಕೈಯ ಮಾಡಿ
ಬಸವಳಿದು ನಿಂತ ಈ ಬಸವ ದಳದ ಭಕ್ತರಿಗೆ ವರವ ನೀಡಿ ॥ 6 ॥

- ಶರಣ.ಮಹಾದೇವ ಗುಡೇರ
ಜೆ.ಎಸ್.ಎಸ್. ಕಾಲೇಜ್, ಗೋಕಾಕ್

ದಿ. 30-6-1995ರಂದು ಹಿರಿಯೂರಿನಲ್ಲಿ ಲಿಂಗೈಕ್ಯರಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರ ಲಿಂಗೈಕ್ಯದ ವಾರ್ತೆ ತಿಳಿದು ಬರೆದ ಪದ್ಯ

ಕಿರಣಗನ್ನಡಿ

ಲೇಖನಗಳು	ಲೇಖಕರು	ಪುಟ
1. ಮಂಗಳಾಂಗ ಗುರು ಲಿಂಗಾನಂದರೆ (ಪದ್ಯ)	ಮಹಾದೇವ ಗುಡೇರ	1
2. ಬೆಂಗಳೂರಿನ ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ 817ನೆಯ ಬಸವ ಪಂಚಮಿ ಆಚರಣೆ		3
3. ಸಂಪಾದಕೀಯ:	ಮಾತಾಜಿ	
1. ಯೋಗಿಗೆ ಕೋಪವೇ ಮಾಯೆ		6
2. ಪೀಠ ಮತ್ತು ಪೀಠಾಧಿಕಾರಿ		7
4. ಬಸವ ವಚನಾಮೃತ -ಭಾಗ 43	ಮಾತಾಜಿ	8
5. ವಧು-ವರಾನ್ವೇಷಣೆ ವಿಭಾಗ		31
6. 25ನೆಯ ಶರಣ ಮೇಳದ ಹಿರಿಮೆ (ಕವನ)	ಶಾರದಾ ಬಸವರಾಜ್	32



ದಿ.30-6-2012ರಂದು ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರ 18ನೆಯ ಲಿಂಗೈಕ್ಯ ಸಂಸ್ಮರಣೆ

ಗುರು ವಂದನೆ

ಶ್ರೀಗುರುವಿನ ಶಿವ ಚರಣಕೆ ನಮೋ ನಮೋ ಎಂಬೆನು
ಗುರುದೇವನ ಮಹಾತ್ಯಾಗಕೆ ನತಮಸ್ತಕಳಾದೆನು ॥

ಬಸವಣ್ಣನ ಶ್ರೀ ರಕ್ಷೆಯ ಹೊತ್ತು ನೀವು ಬಂದಿರಿ
ಹೊಸಬಾಳನು ಬಾಳ್ವ ಬಗೆಯ ಈ ಲೋಕಕೆ ತೋರ್ದಿರಿ
ದೇವನೊಬ್ಬ ಮನುಜ ಕುಲಕೆ ಎಂಬ ತತ್ವ ಸಾರ್ದಿರಿ
ಮನುಜರೆಲ್ಲರೊಂದೆ ಎಂಬ ಭ್ರಾತೃತ್ವವ ಬೀರ್ದಿರಿ ॥

ಅಡಿಯ ಇಟ್ಟು ನಡೆದಲೆಲ್ಲ ದೀಪ ಹಚ್ಚಿ ಬಂದಿರಿ
ಬಸವ ಭಾನು ಕ್ರಾಂತಿ ಉಷೆಯು ಆಗಿ ಮುಂದೆ ನಡೆದಿರಿ
ಗುರುದೇವ ಲಿಂಗಾನಂದ ಹೆಸರು ಅಮರವಾಗಿದೆ
ಸಚ್ಚಿದಾನಂದನ ಶುಭ ರಕ್ಷೆಯು ತಮಗಿದೆ ॥

ಕಲ್ಯಾಣ ಕಿರಣವೇ ಆಹ್ವಾನ ಪತ್ರಿಕೆ

ಶರಣ ಬಂಧುಗಳೇ,

ಕಾರ್ಯಕ್ರಮಗಳು ಮೇಲಿಂದ ಮೇಲೆ ಆಗುತ್ತಲಿವೆ. ಭಕ್ತರ ಸಂಖ್ಯೆ ಬೆಳೆಯುತ್ತಲಿದೆ. ಎಲ್ಲರಿಗೂ ಪ್ರತ್ಯೇಕ ಆಹ್ವಾನ ಪತ್ರಿಕೆ ಕಳಿಸಲು ಸಾಧ್ಯವಿಲ್ಲದ ಮಾತಾಗಿದೆ. ಆದ್ದರಿಂದ ಕಲ್ಯಾಣ ಕಿರಣ ಮಾಸ ಪತ್ರಿಕೆಯಲ್ಲಿ ಕೊಟ್ಟ ಮಾಹಿತಿಯನ್ನೇ ನಿಮ್ಮ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಪ್ರತ್ಯೇಕ. ಆಹ್ವಾನವನ್ನು ನಿರೀಕ್ಷಿಸದೆ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂದು ಆಶಿಸುತ್ತೇವೆ. -ಮಾತಾಜಿ

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297/ 9738028585/ 8892912123
Email :- kalyanakirana1970@gmail.com

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ವಿಶ್ವಗುರು ಬಸವಣ್ಣನವರ
817ನೆಯ ಲಿಂಗೈಕ್ಯ ಸಂಸ್ಮರಣೆ



ಸೋಮ (ಶಿವ)ವಾರ ದಿ. 23-07-2012 ರಂದು ಬೆಳಿಗ್ಗೆ 10-30

ಬೆಂಗಳೂರು ನಗರದ
ಸಿಟಿ ಮಾರುಕಟ್ಟೆ ಪ್ರದೇಶದಲ್ಲಿರುವ
ಸರ್ ಕೆ.ಪಿ.ಪುಟ್ಟಣ್ಣಚೆಟ್ಟಿ (ಟೌನ್ ಹಾಲ್)
ಪುರಭವನದಲ್ಲಿ

❋ ಶರಣರ ಬರುವೆಮಗೆ ಪ್ರಾಣ ಜೀವಾಳ ❋

ಪ್ರಾಯೋಜಕರು :
ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
2035, ಬಸವ ಮಂಟಪ, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್
ಬೆಂಗಳೂರು-560010, ದೂರವಾಣಿ : 080-23131476

ವಿಶ್ವಗುರು ಬಸವಣ್ಣನವರು ಮತ್ತು ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರ 817 ನೆಯ ಲಿಂಗೈಕ್ಯ ದಿನಾಚರಣೆ

ಸ್ಥಳ: ಸರ್.ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನ, ಬೆಂಗಳೂರು,

ದಿ.23-07-2012, ಬೆಳಿಗ್ಗೆ. 10-30

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (30-4-1134)62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ)ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು **"ಬಸವ ಪಂಚಮಿ"** ಎಂದು ಖ್ಯಾತಿವೆತ್ತಿದೆ. ಈ ವರ್ಷ 817ನೆಯ ಲಿಂಗೈಕ್ಯ ದಿನವು ಶಿವ (ಸೋಮ) ವಾರ ದಿ. 23-7-2012ರಂದು ಒದಗಿ ಬಂದಿದೆ. ಆದಿ ಪ್ರಮಥ, ಗಣಾಧಿಪತಿ ಬಸವಣ್ಣನವರು ಲಿಂಗೈಕ್ಯರಾದ ಮರು ದಿವಸ ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರು ಸಹ ಉರಿಯುಂಡ ಕರ್ಪುರದಂತೆ ಲಿಂಗೈಕ್ಯರಾದರು. ಅವರ 817ನೆಯ ಲಿಂಗೈಕ್ಯ ಸಂಸ್ಮರಣೆಯನ್ನು ಸಹ ಆಚರಿಸಲಾಗುತ್ತಿದೆ. ಪವಿತ್ರ ಹಬ್ಬಗಳಾದ ಬಸವ ಪಂಚಮಿ ಮತ್ತು ನೀಲಾಂಬಿಕಾ ಷಷ್ಠಿಯನ್ನು ಭಕ್ತಿ ಪೂರ್ವಕವಾಗಿ ಆಚರಿಸಬೇಕಾದುದು ನಮ್ಮೆಲ್ಲರ ಕರ್ತವ್ಯ.

ದಿ. 23-7-2012ರಂದು ಸರ್. ಪುಟ್ಟಣ್ಣಶೆಟ್ಟಿ ಟೌನ್‌ಹಾಲ್‌ದಲ್ಲಿ ಬೆಳಿಗ್ಗೆ 10-30ರಿಂದ 817ನೆಯ ಬಸವ ಲಿಂಗೈಕ್ಯ ಸಂಸ್ಮರಣೆಯನ್ನು, ದಿ.24-7-2012ರಂದು ರಾಜಾಜಿನಗರದ 20ನೆಯ ಮುಖ್ಯರಸ್ತೆಯಲ್ಲಿರುವ ಬಸವ ಮಂಟಪದಲ್ಲಿ ಸಾಮೂಹಿಕ ಇಷ್ಟಲಿಂಗಪೂಜೆಯೊಡನೆ ನೀಲಾಂಬಿಕಾ ಷಷ್ಠಿಯನ್ನು ಆಚರಿಸಲಾಗುತ್ತಿದೆ.

ವಚನ ನೃತ್ಯ ರೂಪಕ

ಅತ್ಯಂತ ವಿಶೇಷವಾದ ವಚನ ನೃತ್ಯ ರೂಪಕಗಳನ್ನು ಏರ್ಪಡಿಸಲಾಗುವುದು. ವೈಭವಯುತವೂ ಅರ್ಥಗರ್ಭಿತವೂ ಆದ ನೃತ್ಯ ರೂಪಕಗಳು ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಲಿವೆ.

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಈ ಎರಡು ದಿನಗಳ ಕಾರ್ಯಕ್ರಮವನ್ನು, ಉಪನ್ಯಾಸ ಮತ್ತು ನಂತರ ಗಣ ಪ್ರಸಾದ (ಭೋಜನ)ವನ್ನು ವ್ಯವಸ್ಥೆ ಮಾಡಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ವ್ಯವಸ್ಥೆ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

ಶರಣ ಎನ್. ಪುಟ್ಟರುದ್ರ, ಗೌರವಾಧ್ಯಕ್ಷರು,
ಲಿಂಗಾಯತ ಧರ್ಮ ಮಹಾಸಭಾ

ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮೀಜಿ
ಪ್ರಧಾನ ಕಾರ್ಯದರ್ಶಿ, ಬಸವ ಮಂಟಪ

ದಿ. 23ರ ಕಾರ್ಯಕ್ರಮ ವಿವರ

ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಸಮೀಪದಲ್ಲಿರುವ ಸರ್.ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ 817ನೆಯ ಬಸವ ಪಂಚಮಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

1. ಬೆಳಿಗ್ಗೆ 10-30ಗಂಟೆಗೆ ಕಾರ್ಯಕ್ರಮ ಆರಂಭ
2. ಕಾರ್ಯಕ್ರಮದ ನಂತರ 2 ಗಂಟೆಗೆ ಗಣದಾಸೋಹ (ಊಟ)
3. ಸಾಂಸ್ಕೃತಿಕ ಕಾರ್ಯಕ್ರಮ 3-30 ರಿಂದ 5-30

ನೀಲಾಂಬಿಕಾ ಷಷ್ಠಿ - ದಿ.24-07-2012ರಂದು ರಾಜಾಜಿ ನಗರದ ಬಸವ ಮಂಟಪದಲ್ಲಿ

ಸಾಮೂಹಿಕ ಇಷ್ಟಲಿಂಗ ಪೂಜೆಯೊಡನೆ

ಪರಮ ದಾಸೋಹವನು ನೆರೆ ಮಾಡಿ ಜಂಗಮದ
ಪರಮ ಪ್ರಸಾದವನು ಸವಿಸು ಸುಖದಿ
ಕರದಿಷ್ಟಲಿಂಗದೊಳು ಶರೀರವನಿಂಬಿಟ್ಟ
ಕರುಣೆ ನೀಲಮ್ಮ ಶರಣು ಯೋಗಿನಾಥ

ತಾಯಿ ನೀಲಾಂಬಿಕೆಯವರು ಅಸಾಮಾನ್ಯ ಯೋಗಿಣಿ. ಇಚ್ಛಾಮರಣಿಯಾಗಿ ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದ ಮರುದಿವಸ ಅವರು ಕರದಿಷ್ಟ ಲಿಂಗದ ಪೂಜೆ ಮಾಡುತ್ತ ಲಿಂಗೈಕ್ಯರಾದರು. ಈ ನಿಮಿತ್ತ ದಿ. 24-7-2012ರಂದು 817ನೆಯ ನೀಲಾಂಬಿಕಾ ಷಷ್ಠಿಯನ್ನು ಬೆಳಿಗ್ಗೆ 10-30 ರಿಂದ ಬೆಂಗಳೂರಿನ ರಾಜಾಜಿ ನಗರದ ಬಸವ ಮಂಟಪದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಸನ್ನಿಧಿಯಲ್ಲಿ ಆಚರಿಸಲಾಗುತ್ತಿದೆ.

ಪರ ಊರುಗಳಿಂದ ಬರುವವರಿಗೂ ಸಹ ಬಸವ ಮಂಟಪದಲ್ಲಿ ವಸತಿ-ಊಟದ ವ್ಯವಸ್ಥೆ ಇರುವುದರಿಂದ ಆಗಮಿಸಿ ಬಸವ ಪಂಚಮಿ ಉತ್ಸವದಲ್ಲಿ ಭಾಗಿಗಳಾಗಲು ಕೋರುತ್ತೇವೆ. ಬಸ್ಸುಗಳಲ್ಲಿ ಬರುವವರು ರಾಜಾಜಿನಗರದ ನವರಂಗ್ ಟಾಕೀಸ್ ಬಳಿ ಇಳಿದರೆ ಬಸವ ಮಂಟಪವನ್ನು 10 ನಿಮಿಷದಲ್ಲಿ ತಲುಪಬಹುದು, ಬಸವ ಮಂಟಪವು ರಾಜಾಜಿನಗರದ 2ನೆಯ ಬ್ಲಾಕಿನಲ್ಲಿ 20ನೆಯ ಮುಖ್ಯರಸ್ತೆಯಲ್ಲಿ (ಸಿಟಿ ಆಸ್ಪತ್ರೆ ಪಕ್ಕ) ಇದೆ.

ವಿಶೇಷ ಮನವಿ :- ಸಾಮಾನ್ಯವಾಗಿ ಅನೇಕರು ಭಾನುವಾರಗಳನ್ನು ಶರಣರ ಜಯಂತಿ, ಲಿಂಗೈಕ್ಯ ಸಂಸ್ಮರಣೆ ಮಾಡಲು ಆಯ್ಕೆ ಮಾಡಿಕೊಳ್ಳುತ್ತಾರೆ. ಮಹಾನುಭಾವರಿಗೆ ಗೌರವ ತೋರಿಸಲು ನಾವು ಅಂದೇ ಮಾಡಬೇಕು. ಒಂದು ರಜೆಯನ್ನು ಸಹ ಹಾಕಲಾರದ ಮನೋಭಾವ ಸರಿಯಲ್ಲ; ಅಂದು ಒಂದು ದಿವಸವಾದರೂ ಅಂಗಡಿ ಮುಚ್ಚಿ ಮಹಾತ್ಮರಿಗೆ ಗೌರವ -ಕೃತಜ್ಞತೆ ಸಲ್ಲಿಸಬೇಕು ಎಂಬ ಮನೋಭಾವ ಹೊಂದದೆ ಇರುವುದು ಸೂಕ್ತವಲ್ಲ. ಧರ್ಮಕ್ಕಾಗಿ ತನು-ಮನ- ಧನಗಳನ್ನು ಮಾತ್ರವಲ್ಲದೆ ಅಭಿಮಾನ -ಸಮಯ-ಪ್ರಾಣಗಳನ್ನು ಮೀಸಲಿಡಬೇಕು. ಬಸವ ಪಂಚಮಿ ಸೋಮವಾರ ಬಂದಿದ್ದು ರಜಾ ದಿನ ಅಲ್ಲದಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ಸಹೃದಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

ಬಸವ ಮಂಟಪಕ್ಕೆ ಬಸ್ ಮಾರ್ಗ

ಮೆಜೆಸ್ಟಿಕ್‌ನಿಂದ 78A, 80A, 80E, 252F, 252H ರೂಟಿನ ಸಿಟಿ ಬಸ್ಸುಗಳು ಬರುತ್ತವೆ.

ಸಂಪಾದಕೀಯ :

1. ಯೋಗಿಗೆ ಕೋಪವೇ ಮಾಯೆ

ಲಿಂಗಾಂಗಯೋಗಿ ಸಿದ್ಧರಾಮೇಶ್ವರರು ಹೇಳುತ್ತಾರೆ, "ಯೋಗಿಗೆ ಕೋಪವೇ ಮಾಯೆ, ರೋಗಿಗೆ ಅಪಥ್ಯವೇ ಮಾಯೆ." ಎಂದು. ರೋಗಿಯಾದವನು ನಾಲಿಗೆಯ ಮೇಲೆ ನಿಯಂತ್ರಣ ಹೊಂದಿರಬೇಕು. ಅದನ್ನು ಸಡಿಲಬಿಟ್ಟು ತಿಂದರೆ ರೋಗವು ವಾಸಿಯಾಗದೆ ಉಲ್ಬಣಗೊಳ್ಳುವುದು.

> ನಾಲಿಗೆಯ ಕಟ್ಟಿಹನು ಕಾಲಂಗೆ ದೂರಹನು.
> ನಾಲಿಗೆಯ ರುಚಿಯು ಲೋಲಾಡುತಿರಲಾತ
> ಕಾಲಂಗೆ ಹತ್ತಿರಿಹನು ಸರ್ವಜ್ಞ ॥

ಎಂದು ಸರ್ವಜ್ಞನು ಹೇಳುವನು. ಅದಕ್ಕಾಗಿ ರೋಗಿ ಪಥ್ಯವನ್ನು ಮಾಡಬೇಕು. ಅಪಥ್ಯ ಅವರ ಶತ್ರು. ನಾಲಿಗೆಯು ಎರಡು ಕೆಲಸಗಳನ್ನು ಮಾಡುವ ಇಂದ್ರಿಯ. ಒಂದು ರುಚಿಯನ್ನು ಗ್ರಹಿಸುವುದು; ಇನ್ನೊಂದು ಮಾತನಾಡುವುದು. ಇಂಥ ನಾಲಿಗೆಯನ್ನು ಸಡಿಲಬಿಟ್ಟು ತಿಂದರೆ ರೋಗ, ಸಡಿಲ ತಪ್ಪಿ ಮಾತನಾಡಿದರೆ ಜಗಳ.

ಕೋಪ ಎಂಬುದು ಬಹು ಕೆಟ್ಟ ಗುಣ. ಅದು ಉದ್ರೇಕಗೊಂಡಾಗ ಮನುಷ್ಯನ ವಿಕೃತ (ನಿಜ) ಸ್ವರೂಪವನ್ನು ಬಯಲಿಗಿಡುವದು. ಅಲ್ಲಿಯವರೆಗೂ ಆತ ಸುಸಂಸ್ಕೃತ, ಸಭ್ಯ ಮನುಷ್ಯ ಎಂದು ತಿಳಿದವರು ಈಗಿನ ವಿಕೃತ ಉದ್ರಿಕ್ತ ರೂಪವನ್ನು ನೋಡಿ ಇಷ್ಟೇನೆ ? ಎಂದು ಅಳೆದು ಬಿಡುವರು. ಅದಕ್ಕಾಗಿಯೇ ಧರ್ಮಗುರು ಬಸವಣ್ಣನವರು ಹೇಳಿರುವುದು. "ತನುವಿನ ಕೋಪ ತನ್ನ ಹಿರಿಯತನದ ಕೇಡು, ಮನದ ಕೋಪ ತನ್ನ ಅರಿವಿನ ಕೇಡು" ಎಂಬುದಾಗಿ. ಕೋಪ ಉದ್ರೇಕಗೊಂಡಾಗ ಕಣ್ಣು ಕೆಂಪಾಗುವುವು. ಮೈ ನಡುಗುವುದು, ಬಾಯಲ್ಲಿ ಅವಾಚ್ಯ ಶಬ್ದಗಳು ಪುಂಖಾನುಪುಂಖವಾಗಿ ಉದುರುವುವು. ತಾನೇನು ಮಾತನಾಡುತ್ತಿದ್ದೇನೆ ಎಂಬ ಪ್ರಜ್ಞೆಯೂ ಕೆಲವರಿಗೆ ಇರದು. ಕೆಲವರಂತೂ ಕೋಪ ಬಂದಾಗ ಮನುಷ್ಯತ್ವವನ್ನೂ ಕಳೆದುಕೊಂಡು ಮೃಗೀಯವಾಗಿ ವರ್ತಿಸುವರು. ಅದು ಅವರ ಸಂಸ್ಕಾರವನ್ನು ತೋರಿಸುತ್ತದೆ.

ಕೆಲವೊಮ್ಮೆ ನಿಂದೆಗಳು ಬರುತ್ತವೆ. ಹಾಗೆ ನಿಂದೆಗಳು ಬಂದಾಗ ಪ್ರಾಜ್ಞರಾದವರು ಹೇಗೆ ವರ್ತಿಸಬೇಕು? ಅಕ್ಕ ಮಹಾದೇವಿ ತಾಯಿಯವರು ಹೇಳುವಂತೆ, "ಲೋಕದಲ್ಲಿ ಹುಟ್ಟಿರ್ದ ಬಳಿಕ ಸ್ತುತಿ-ನಿಂದೆಗಳು ಬಂದಡೆ ಮನದಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು." ನಿಂದಿಸುವುದು ಲೋಕದ ಜನರ ಸಹಜ ನಡೆ. ಅದನ್ನು ಸಹಜ ಮನಸ್ಥಿತಿಯಿಂದ ಸ್ವಾಗತಿಸಬೇಕು. ಅದು ಸತ್ಯಾಪವಾದವೇ ಇರಲಿ, ಮಿಥ್ಯಾಪವಾದವೇ ಇರಲಿ; ಅಂತರಾವಲೋಕನ ಮಾಡಿಕೊಳ್ಳಬೇಕು. ಬೆಂಕಿಯಿಲ್ಲದೆ ಹೊಗೆ ಏಳುವುದಿಲ್ಲ. ಕೆಲವೊಮ್ಮೆ ವ್ಯಕ್ತಿ ನಿಜವಾಗಿಯೂ ಅನೀತಿವಂತನಿರಲಿಕ್ಕಿಲ್ಲ. ಆದರೆ ಆತ ವ್ಯಾವಹಾರಿಕವಾಗಿ ಸರಿಯಾಗಿ ನಡೆದುಕೊಳ್ಳುವುದಿಲ್ಲ. ಆಗಲೂ ಅಪವಾದಗಳು ಬರುತ್ತವೆ. ಅಂಥ ಸಂದರ್ಭದಲ್ಲಿ ಆತ್ಮಾವಲೋಕನ ಮಾಡಿಕೊಳ್ಳಬೇಕು. ತನ್ನ ಲೋಪವನ್ನು ತಿದ್ದಿಕೊಳ್ಳಬೇಕೇ ಹೊರತು ಅನ್ಯರ ಮೇಲೆ ಕೋಪಗೊಂಡು ಹಾರಾಡಬಾರದು. ಅದರಿಂದ ವ್ಯಕ್ತಿತ್ವಕ್ಕೆ ಚ್ಯುತಿ ಬರುವುದಲ್ಲದೆ ಅನ್ಯರ ಕಣ್ಣಲ್ಲಿ ಕುಬ್ಜನಾಗಿ ತೋರುವನು.

ಯಾರಾದರೂ ನಿಂದೆ ಮಾಡಿದ್ದಾರೆ ಎಂಬ ವಾರ್ತೆ ತಲುಪುತ್ತದೆ ಎಂದುಕೊಳ್ಳುವಾ. ಆಗ ಏನು ಮಾಡಬೇಕು ?

> ಕಾಣದ ಠಾವಿನಲ್ಲಿ ಜರಿದರೆಂದರೆ
> ಕೇಳಿ ಪರಿಣಾಮಿಸಬೇಕು
> ಅದೇನು ಕಾರಣ, ಕೊಳ್ಳದೆ ಕೊಡದೆ
> ಅವರಿಗೆ ಸಂತೋಷವಹುದಾಗಿ ;
> ಎನ್ನ ಮನದ ತದ್ವೇಷವನಳಿದು ನಿಮ್ಮ ಶರಣರಿಗೆ
> ಶರಣೆಂಬುದ ಕರುಣಿಸು ಲಿಂಗದೇವ.

ನಮ್ಮ ಜೇಬಿನಿಂದ ಏನೂ ಖರ್ಚಾಗದೆ, ನಮ್ಮನ್ನು ನಿಂದಿಸಿ ಅವರು ಸಂತೋಷ ಪಡುವುದಾದರೆ ಪಡಲಿ. ನನ್ನ ಮನದಲ್ಲಿ ದ್ವೇಷಭಾವನೆ ಮೂಡದೆ ಅಂಥ ನಿಂದಕರನ್ನು ಶರಣರೆಂದು ತಿಳಿದು ಅವರಿಗೆ ಶರಣು ಎನ್ನುವ ಮನಸ್ಥಿತಿಯನ್ನು ಕರುಣಿಸು ಎಂದು ಲಿಂಗದೇವನಲ್ಲಿ ಗುರು ಬಸವಣ್ಣನವರು ಬೇಡುತ್ತಾರೆ.

> ಆರೇನೆಂದರೂ ಓರಂತಿಪ್ಪುದೇ ಸಮತೆ
> ಆರು ಜರಿದರೂ ಅವರೆನ್ನ ಮನದ
> ಕಾಳಿಕೆಯ ಕಳೆದರೆಂಬುದೇ ಸಮತೆ

ಎನ್ನುತ್ತಾರೆ ಶ್ರೀ ಸಿದ್ಧರಾಮೇಶ್ವರರು. ತನಗೆ ಬಂದ ಅಪವಾದ ಅಥವಾ ನಿಂದೆ ಕುರಿತು ಬಹಿರಂಗವಾಗಿ ಬೈದಾಡುವುದರಿಂದ ಇನ್ನೂ ಹೆಚ್ಚು ಜನಕ್ಕೆ (ಅಪ)ಪ್ರಚಾರವಾಗುವುದು. ನಿಂದೆ ಅಥವಾ ಅಪವಾದವನ್ನು ಉದಾಸೀನ ಮಾಡುವುದರಿಂದ ಅದರ ಶಕ್ತಿ ಕುಂದುವುದು. ನಾಲಿಗೆಯ ಮೇಲೆ ಹಿಡಿತ ಸಾಧಿಸುವುದು ಬಹುಮುಖ್ಯ. ನಾಲಿಗೆಯ ಮೇಲೆ ಹಿಡಿತ ಸಾಧಿಸುವುದೆಂದರೆ ವಾಗ್ಮಿತ್ವ ಪಡೆದುಕೊಳ್ಳುವುದಷ್ಟೆ ಅಲ್ಲ ಮಾತಿನಲ್ಲಿ ಸಂಯಮ ಮತ್ತು ಶಾಂತಿ ಸಾಧಿಸುವುದೂ ಸೇರಿದೆ.

2. ಪೀಠ ಮತ್ತು ಪೀಠಾಧಿಕಾರಿ

ದಿ. 12-6-2012ರಂದು ಕರ್ನಾಟಕ ರಾಜ್ಯ ಕೊರಮ ಕೊರಚರ ಮಹಾಸಂಘದ ರಾಜ್ಯಾಧ್ಯಕ್ಷರಾದ ಶರಣ ಆರ್. ರಾಮಚಂದ್ರ ಅವರು ಬಂದಿದ್ದರು. ಶರಣ. ನುಲಿಯ ಚಂದಯ್ಯನವರು ಇದೇ ಸಮಾಜದವರು ಎಂದು ನನಗೆ ಗೊತ್ತಾದುದು ಅಂದೆ ! ನಮ್ಮ ದೇಶದಲ್ಲಿ ಸಾವಿರಾರು ಜಾತಿ ಉಪಜಾತಿಗಳು ಇರುವುದರಿಂದ ಅವುಗಳ ಒಳಸುಳಿಗಳು ನಮಗೆ ಗೊತ್ತಾಗುವುದು ಕಷ್ಟ. ಅವರು ತಮ್ಮ ಸಮಾಜಕ್ಕೆ ಗುರು ಮತ್ತು ಗುರುಪೀಠದ ಅಗತ್ಯವಿದೆ ಎಂದರು. " ಅಹುದು ಸಮಾಜಕ್ಕೆ ಮಾರ್ಗದರ್ಶನ ಮಾಡಲು ಗುರು ಮತ್ತು ಗುರುಪೀಠ ಬೇಕು" ಎಂದು ನಾನಂದೆ. ಆಗ ಅವರು ಒಂದು ಮಾತು ಹೇಳಿದರು, "ನನಗೆ ಅನ್ನಿಸುತ್ತೆ ಗುರುಗಳು ಇರಲಿ ಬಿಡಲಿ, ಒಂದು ಗುರುಪೀಠ, ಮಠ ಇರಬೇಕು. ಒಂದು ಸಮಿತಿಯನ್ನು ಮಾಡಿ, ಆ ಪೀಠವನ್ನು ನಡೆಸಿಕೊಂಡು ಹೋಗಬೇಕು. ಏಕೆಂದರೆ ಈ ಕಾಲದಲ್ಲಿ ಸಂಯಮಿಗಳಾದ ಸೂಕ್ತ ಗುರುಗಳು ಸಿಕ್ಕುವುದು ಕಷ್ಟ." ಅವರ ಆಲೋಚನೆಯಲ್ಲಿದ್ದ ಸತ್ಯವನ್ನು ಗುರುತಿಸಿ ನಾನು ಚಕಿತಳಾದೆ. ಬಹಿರಂಗ ಜಗತ್ತಿನ ಆಕರ್ಷಣೆಗಳ ಸೆಳೆತದಿಂದ ಪಾರಾಗಿ, ಅಂತರಂಗದ ಹೊಯ್ದಾಟವನ್ನು ನಿಯಂತ್ರಿಸಿಕೊಂಡು ಸಾಮಾಜಿಕ, ಧಾರ್ಮಿಕ ಕಳಕಳಿಯಿಂದ ಕೆಲಸ ಮಾಡುವ ಸ್ವಾಮಿಗಳಾಗಲು ಮುಂದೆ ಬರುವವರು ಇನ್ನು ಮುಂದಿನ ಕಾಲದಲ್ಲಿ ಸಿಗುವುದು ದುರ್ಲಭವಾಗುವುದು. ನೀವು ಹೇಳಿದಂತಹ ಸಂದರ್ಭವೇ ಒದಗಿ ಬರಬಹುದೇನೋ !" ಎಂದು ಹೇಳಿದೆ.

ಒಂದು ಜಾತಿಗೆ ಪೀಠಾಧಿಕಾರಿಯನ್ನು ಮಾಡಿದ ಬಳಿಕ ಕೆಲವರು ಅವರ ಜನಾಂಗದವರು ಬಂದು " ನಮ್ಮ ಗುರುಗಳು ಭಯೋತ್ಪಾದಕರಾಗಿದ್ದಾರೆ. ನಮ್ಮ ಮನೆಗಳಿಗೆ ಬಂದು ಇಂತಿಷ್ಟು ಕಾಣಿಕೆ ಕೊಡಲೇಬೇಕು ಎನ್ನುತ್ತಾರೆ. ನಾವು ಬಡ ಕಾಯಕದವರು. ಎಲ್ಲಿಂದ ತರಬೇಕು ?" ಧರ್ಮ ಪ್ರಚಾರದ ಕಳಕಳಿ ಹೊಂದಿರದ ಇಂಥ ಗುರುಗಳಿಂದ ಆಯಾ ಜಾತಿಯವರಿಗೆ ಪ್ರಯೋಜನವೇನು ?

ಹೀಗೆ ಗುರು ಪೀಠಗಳು ಅತೀವ ಅಗತ್ಯವಾಗಿದ್ದರೂ ಅವುಗಳು ಸೃಷ್ಟಿಸುವ ಸಮಸ್ಯೆಗಳೂ ಬಹಳವೆನ್ನಿಸದಿರದು.

ಕಲ್ಯಾಣ ಕಿರಣ ಚಂದಾ

ಕಲ್ಯಾಣಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್

ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್

ಬೆಂಗಳೂರು-560010, ದೂರವಾಣಿ : 080-23131476 / 9945806297

ಬಸವ ವಚನಾಮೃತ

- ಮಾತಾಜಿ

865. ಶರಣನಿಗೆ ಲಗ್ನ-ವಿಘ್ನಗಳಿಲ್ಲ.

ಲಗ್ನವೆಲ್ಲಿಯದೊ ವಿಘ್ನವೆಲ್ಲಿಯದೋ ಸಂಗಯ್ಯಾ ?
ದೋಷವೆಲ್ಲಿಯದೋ ದುರಿತವೆಲ್ಲಿಯದೋ ಸಂಗಯ್ಯಾ ?
ನಿಮ್ಮ ಮಾಣದೆ ನೆನೆವಂಗೆ ಭವಕರ್ಮವೆಲ್ಲಿಯದೋ
ಲಿಂಗದೇವಯ್ಯಾ ? –ಬವದೀ. 867

ಸೃಷ್ಟಿಕರ್ತನನ್ನು ನಂಬಿದವನಲ್ಲಿ ಅಪಾರವಾದ ಆತ್ಮಬಲವಿರಬೇಕು : ಭಯಗ್ರಸ್ತ ಮನಸ್ಸನ್ನು ಹೊಂದಿರಬಾರದು. ಇಂಥ ಗಳಿಗೆ ಶುಭ, ಒಳ್ಳೆಯ ಲಗ್ನ(ಗಳಿಗೆ ಕೂಡಿ ಬಂದಿದೆ)ವಿದೆ : ಅಂಥ ಗಳಿಗೆ ಕೆಟ್ಟದ್ದು, ಕೆಲಸಕ್ಕೆ ಕೇಡಾಗುತ್ತದೆ – ಇಂಥ ಭ್ರಾಂತಿ ಸರಿಯಲ್ಲ. ಲಿಂಗದೇವನನ್ನು ನಂಬಿ ಯಾವ ಸಮಯದಲ್ಲಿ ಯಾವ ಕೆಲಸವನ್ನಾದರೂ ಮಾಡಬಹುದು. ಮಾಡುವುದರಲ್ಲಿ ಎಲ್ಲಿ ದೋಷವಾಯಿತೋ, ಮೈಲಿಗೆಯಾಯಿತೋ ಎಂಬ ಶಂಕೆಯೂ ಸರಿಯಲ್ಲ. ಬಿಟ್ಟೂ ಬಿಡದೆ ನಿರಂತರವಾಗಿ ನೆನೆಯುವವನಿಗೆ ವಿಘ್ನವೂ ಇಲ್ಲ. ದೋಷ-ದುರಿತಗಳೂ ಇಲ್ಲ. ಭವ ಕರ್ಮ ಮುನ್ನವೇ ಇಲ್ಲ. ಅಮವಾಸ್ಯೆ, ಹುಣ್ಣಿಮೆ, ಮಂಗಳವಾರಗಳಂದು ಶುಭಕಾರ್ಯಗಳನ್ನು ಮಾಡಬಾರದೆಂಬ ಅಂಜಿಕೆ ಬೇಡ. ದೇವರನ್ನು ನಂಬಿ ನಡೆಯುವವನಿಗೆ ಎಲ್ಲ ದಿನ, ವಾರ, ಗಳಿಗೆಯೂ ಶುಭವೆ !

866. ಶರಣನ ಕಾಯಕವೇ ಕೈಲಾಸ

ಶರಣ ನಿದ್ರೆಗೈದಡೆ ಜಪ ಕಾಣಿರೊ,
ಶರಣನೆದ್ದು ಕುಳಿತಡೆ ಶಿವರಾತ್ರಿ ಕಾಣಿರೊ,
ಶರಣ ನಡೆದುದೆ ಪಾವನ ಕಾಣಿರೊ,
ಶರಣ ನುಡಿದುದೆ ಶಿವತತ್ವ ಕಾಣಿರೊ !
ಲಿಂಗದೇವನ ಶರಣನ
ಕಾಯಕವೇ ಕೈಲಾಸ ಕಾಣಿರೊ!
–ಬವದೀ. 868

ದೇವನ ಧ್ಯಾನವನ್ನೆ ಹಾಸು ಹೊಕ್ಕಾಗಿ ಮಾಡಿಕೊಂಡ ಶರಣನು ನಿದ್ರೆಗೆ ಹೋದರೆ ಅದು ಜಪಯೋಗವಾಗುತ್ತದೆ. ಏಕೆಂದರೆ ನಿದ್ರಾ(ಸ್ವಪ್ನಾ)ವಸ್ಥೆಯಲ್ಲಿ ಸಹ ಅವನ ಅಂತರ್ಮನವು ಲಿಂಗದೇವನ ಧ್ಯಾನದಲ್ಲಿ ತೊಡಗಿರುತ್ತದೆ. ಶರಣನು ಎದ್ದು ಕುಳಿತರೆ ಅದು ಶಿವರಾತ್ರಿಯ ಜಾಗರಣೆಯಾಗಿರುತ್ತದೆ. ಶರಣನು ಸದಾ ಜಾಗೃತ ಸ್ಥಿತಿಯಲ್ಲಿರುತ್ತಾನೆ. ಅವನ ಜೀವನ ಹಾಗೂ ನಡೆ ಬಹಳ ಪವಿತ್ರವಾದುದು ; ಅವನು ಮಾತನಾಡಿದರೆ ಅದು ಶಿವತತ್ತ್ವ ಎನಿಸಿಕೊಳ್ಳುತ್ತದೆ. ಹೀಗಾಗಿ ಲಿಂಗದೇವನ ಶರಣರು ಮಾಡುವ ಕಾಯಕವು "ಬರಿ ದುಡಿಮೆಯಲ್ಲ. ಸಾಕ್ಷಾತ್ ಕೈಲಾಸ." ಇಲ್ಲಿ ಕೈಲಾಸವೆಂಬುದು ಸ್ಥಾನವಿಶೇಷವಲ್ಲ, ತತ್ತ್ವವಿಶೇಷ. ಕೈಲಾಸ ಎಂಬ ಪದ ಸಮೃದ್ಧಿ ಹಾಗೂ ಸಂತೃಪ್ತಿಯ ಸಂಕೇತ. ಇದು ಒಂದು ಮನಸ್ಥಿತಿ.

867. ಶರಣರು ಉಪಮಾತೀತರು.

ಉಪಮಿಸಬಾರದ ಉಪಮಾತೀತರು,
ಕಾಲಕರ್ಮರಹಿತರು, ಭವವಿರಹಿತರು,
ಲಿಂಗದೇವಾ, ನಿಮ್ಮ ಶರಣರು.
–ಬವದೀ. 869

ಶರಣನು ಆದರ್ಶದ ಸಾಕಾರ. ಅವನಿಗೆ ಹೋಲಿಸಲು ಸಾಮಾನ್ಯ ಮಾನವರಲ್ಲಿ ಯಾರೂ ಕಾಣಸಿಗರು. ಅವನು ಕಾಲವನ್ನು ಗೆದ್ದವನು. ಆ ಗಳಿಗೆ ಶುಭ, ಈ ಗಳಿಗೆ ಅಶುಭ ಮುಂತಾದ ಭ್ರಾಂತಿ ತೊರೆದವನು. ಕಾಲ ಎಂದರೆ ಸಾವು, ಯಮ. ಶರಣನು ಸಾವಿನ ಭಯವನ್ನು ಸಹ ಗೆದ್ದವನಾಗಿರುತ್ತಾನೆ. ಶರಣನು ಕುಕರ್ಮವಿರಹಿತನು. ಅವನು ಪಾಪ-ಪುಣ್ಯಗಳಿಗೆ ಅತೀತನಾಗಿ ಕೆಲಸ ಮಾಡುವುದರಿಂದ ಕರ್ಮ ರಹಿತನು ಹುಟ್ಟು-ಸಾವು, ಜನ್ಮ-ಜನ್ಮಾಂತರವನ್ನು ಗೆದ್ದು ಶರಣನು ಭವವಿರಹಿತನಾಗಿರುತ್ತಾನೆ.

868. ಶರಣನು ಸಂದೇಹಿ-ಸೂತಕಿಯಲ್ಲ

ಭವಕ್ಕೆ ಹುಟ್ಟುವನಲ್ಲ, ಸಂದೇಹಿ-ಸೂತಕಿಯಲ್ಲ,
ಆಕಾರ ನಿರಾಕಾರನಲ್ಲ ನೋಡಯ್ಯಾ.
ಕಾಯವಂಚಕನಲ್ಲ, ಜೀವವಂಚಕನಲ್ಲ
ಶಂಕೆಯಿಲ್ಲದ ಮಹಾಮಹಿಮ ನೋಡಯ್ಯಾ.
ಲಿಂಗದೇವನ ಶರಣನುಪಮಾತೀತ, ನೋಡಯ್ಯಾ. –ಬವದೀ. 870

ಶರಣನು ಪಾಪ ಪುಣ್ಯಕ್ಕೆ ಹೊರತಾಗಿ ಕಾರ್ಯ ಮಾಡುವುದರಿಂದ ಪುನಃ ಭವಕ್ಕೆ ಬರುವನಲ್ಲ ಅಂದರೆ ಜನ್ಮ ತಳೆಯುವವನಲ್ಲ. ಅವನು ಸಂದೇಹಿಯೂ ಅಲ್ಲ. ಸೂತಕಿಯೂ ಅಲ್ಲ. ಅನೇಕ ಧಾರ್ಮಿಕರು ಬಗೆಬಗೆಯ ಸಂದೇಹಗಳನ್ನು ತಳೆದಿರುತ್ತಾರೆ. ಯಾವ ದಿಕ್ಕಿಗೆ ಮುಖ ಮಾಡಿ ಪೂಜೆಗೆ ಕುಳಿತುಕೊಳ್ಳಬೇಕು ? ಏನನ್ನಾದರೂ ಮುಟ್ಟಿ ಮೈಲಿಗೆಯಾಗಿದ್ದೇನೆಯೆ ? ಸ್ನಾನ ಮಾಡಿ ಬರುವಾಗ ಏನಾದರೂ ತಗುಲಿತೆ ? ಹೀಗೆಲ್ಲ ಸಂದೇಹ-ಭ್ರಾಂತಿಯಲ್ಲಿ ತೊಳಲುತ್ತಾರೆ. ಅನ್ಯ ಜಾತಿಯವರು, ಸ್ನಾನ ಮಾಡದೆ ಮಕ್ಕಳು ಮುಟ್ಟಿದರೆ, ಮುಟ್ಟಾದ ಮಹಿಳೆಯರ ನೆರಳು ಬಿದ್ದರೆ ಸೂತಕ ಉಂಟಾಯಿತೆಂದು ಆತಂಕಪಡುತ್ತಾರೆ. ಇಂಥ ಯಾವ ಸಂದೇಹ, ಸೂತಕವೂ ನಿಜ ಶರಣನಿಗೆ ಇರುವುದಿಲ್ಲ. ದೇವರು ಆಕಾರ ಉಳ್ಳವನೆ ? ನಿರಾಕಾರನೆ ? ಎಂಬ ಸಂದೇಹದಲ್ಲಿ ತೊಳಲುವವನಲ್ಲ. ಕಾಯದಿಂದ ದುಡಿಮೆಯನ್ನಾಗಲಿ, ಪೂಜೆಯನ್ನಾಗಲಿ ವಂಚಿಸುವವನಲ್ಲ. ಹಾಗೆಯೇ ಜೀವಗಳ್ಳನೂ ಅಲ್ಲ. ಪ್ರಸಂಗ ಬಂದರೆ ದೇವರಿಗಾಗಿ, ಧರ್ಮಕ್ಕಾಗಿ, ಸಾಹಿತ್ಯ ರಕ್ಷಣೆಗಾಗಿ ಪ್ರಾಣಕೊಡಲು ಸಿದ್ಧನಿರುತ್ತಾನೆ. ಯಾವುದೇ ಬಗೆಯ ಶಂಕೆಗಳಿಲ್ಲದ ನಿರ್ಭಯನು, ನಿಸ್ಸೀಮನು. ಲಿಂಗದೇವನ ಶರಣರು ಉಪಮಾತೀತರು.

869. ಶರಣನ ಪಾದವೇ ಪರುಷ

ಬ್ರಹ್ಮಂಗೆ ವಾಕ್-ಪರುಷ, ವಿಷ್ಣುವಿಂಗೆ ನಯನ-ಪರುಷ,
ರುದ್ರಂಗೆ ಹಸ್ತ-ಪರುಷ,
ನಮ್ಮ ಲಿಂಗದೇವನ ಶರಣಂಗೆ ಪಾದವೇ ಪರುಷ ! –ಬವದೀ. 871

ಪುರಾಣಗಳಲ್ಲಿ ಓದುತ್ತೇವೆ. ಬ್ರಹ್ಮನು ಪ್ರತ್ಯಕ್ಷನಾಗಿ ತನ್ನ ವಾಣಿಯಿಂದ ವರಗಳನ್ನು ಕೊಡುತ್ತಾನೆ. ವಿವಿಧ ಪದವಿಗಳನ್ನು ವಿವಿಧ ಶಕ್ತಿಗಳನ್ನು ಅನುಗ್ರಹಿಸುತ್ತಾನೆ. ಹೀಗೆ ಅವನ ವಾಣಿಯು ಪರುಷ. ವಿಷ್ಣುವು ಕಣ್ಣಿನಿಂದ ನೋಡಿ ಕರುಣೆಯನ್ನು ಹರಿಸಿ ಅನುಗ್ರಹಿಸುತ್ತಾನೆ. ರುದ್ರನು ತಲೆಯ ಮೇಲೆ ಕೈಯಿಟ್ಟು ಅನುಗ್ರಹಿಸುತ್ತಾನೆ. ಹೀಗೆ ಅವರ ಅನುಗ್ರಹ ಶಕ್ತಿಯು ವಾಣಿಯಲ್ಲಿ, ದೃಷ್ಟಿಯಲ್ಲಿ, ಹಸ್ತದಲ್ಲಿ ಇರುತ್ತದೆ. ಶರಣರ ಅನುಗ್ರಹ ಶಕ್ತಿಯು ಪಾದದಲ್ಲಿ ಇರುತ್ತದೆ. ನೀರು ಮನೆಯ ಮಾಳಿಗೆಯ ಮೇಲೆ ಓವರ್ ಹೆಡ್ ಟ್ಯಾಂಕಿನಲ್ಲಿದ್ದರೂ ಅದು ನಲ್ಲಿಯ ಮೂಲಕ ಹರಿದು ಬರುವಂತೆ ಶರಣನ ತಪೋಶಕ್ತಿ, ಅನುಗ್ರಹ ಇವು ಮಸ್ತಿಷ್ಕ (ತಲೆ)ದಲ್ಲಿದ್ದರೂ ಹರಿದು ಬರುವುದು ಪಾದದ ಮೂಲಕ. ಹೀಗೆ ಶರಣನ ಪಾದವೇ ಪರುಷ. ಅದಕ್ಕಾಗಿಯೇ ಪಾದ ನಮಸ್ಕಾರ ಮಾಡುವ ಪದ್ಧತಿ ಭಾರತೀಯರಲ್ಲಿ ರೂಢಿಗೊಂಡಿರುವುದು.

870. ಮನದ ಕೊನೆಯಲ್ಲಿ ದೇವನು

ಸಮುದ್ರ ಘನವೆಂಬೆನೆ? ಧರೆಯ ಮೇಲಡಗಿತ್ತು,
ಧರೆ ಘನವೆಂಬೆನೆ? ನಾಗೇಂದ್ರನ ಫಣಾಮಣಿಯ ಮೇಲಡಗಿತ್ತು,
ನಾಗೇಂದ್ರ ಘನವೆಂಬೆನೆ? ಪಾರ್ವತಿಯ ಕಿರುಕುಣಿಕೆಯ ಮುದ್ರಿಕೆಯಾಯಿತ್ತು,
ಅಂತಹ ಪಾರ್ವತಿ ಘನವೆಂಬೆನೆ? ಪರಮೇಶ್ವರನ ಅರ್ಧಾಂಗಿಯಾದಳು,
ಅಂತಹ ಪರಮೇಶ್ವರ ಘನವೆಂಬೆನೆ? ನಮ್ಮ ಕೂಡಲಸಂಗನ ಶರಣರ
ಮನದ ಕೊನೆಯ ಮೊನೆಯ ಮೇಲಡಗಿದನಾಗಿ
ಆ ಶರಣನ ಘನವೆಂಬೆ. –ಬವದೀ. 872

ಸಮುದ್ರ ಶ್ರೇಷ್ಠ ಎನ್ನೋಣವೆ ? ಅದು ಭೂಮಿಯ ಮೇಲೆ ಹರಡಿದೆ. ಧರೆ ಶ್ರೇಷ್ಠ ಎನ್ನೋಣವೆ ?

ಅದು ಆದಿಶೇಷನ ಹಣೆಯ ಮಣಿಯ ಮೇಲೆ ಕುಳಿತುಕೊಂಡಿದೆ. ನಾಗೇಂದ್ರ ಶ್ರೇಷ್ಠ ಎನ್ನೋಣವೆ ? ಪಾರ್ವತಿಯ ಕಿರುಬೆರಳಿನಲ್ಲಿ ಹಾಕುವ ಉಂಗುರದೊಳಗಿನ ಮುದ್ರಿಕೆಯಾಯಿತು. ಪಾರ್ವತಿ ಶ್ರೇಷ್ಠ ಎನ್ನೋಣವೆ? ಪಾರ್ವತಿಯು ಶಿವನ ಅರ್ಧಾಂಗಿನಿಯಾದಳು. ಅಂಥ ಶಿವನು ಶ್ರೇಷ್ಠ ಎನ್ನೋಣವೆ? ಅವನು ಶಿವಭಕ್ತರ ಮನಸ್ಸಿನ ಒಂದು ಮೂಲೆಯಲ್ಲಿ ಅಡಗಿದ. ಆದ್ದರಿಂದ ಎಲ್ಲರಿಗಿಂತ ಶರಣನೇ ಶ್ರೇಷ್ಠ.

871. ಲಿಂಗವಿಡಿದು ಲಿಂಗಸಿದ್ಧಿ.

ಆಚಾರಲಿಂಗವಿಡಿದು ಅನುಭಾವಲಿಂಗಸಿದ್ಧಿ,
ಅನುಭಾವಲಿಂಗವಿಡಿದು ಮಾರ್ಗಕ್ರಿಯಾಲಿಂಗಸಿದ್ಧಿ,
ಮಾರ್ಗಕ್ರಿಯಾಲಿಂಗವಿಡಿದು ಮೀರಿದ ಕ್ರಿಯಾಲಿಂಗಸಿದ್ಧಿ,
ಮೀರಿದ ಕ್ರಿಯಾಲಿಂಗವಿಡಿದು ಕ್ರಿಯಾನಿಷ್ಪತ್ತಿಲಿಂಗಸಿದ್ಧಿ,
ಇದು ಕಾರಣ, ಲಿಂಗದೇವಾ ಲಿಂಗವಿಡಿದು ಲಿಂಗಸಿದ್ಧಿ ! –ಬವದೀ. 873

ಆಚಾರಲಿಂಗ ಎಂದರೆ ಇಷ್ಟಲಿಂಗ. ಇದರ ಮೂಲಕವೇ ಸಾಧನೆಗೆ ಪ್ರವೇಶ. ಇದರ ಮೂಲಕ ಶರಣರ ಅನುಭಾವ ಅರ್ಥಾತ್ ಶರಣರ ಸತ್ಸಂಗ ಲಭ್ಯವಾಗುತ್ತದೆ. ಲಿಂಗಾಂಗ ಯೋಗ ಮಾರ್ಗಕ್ಕೆ ಪಾದಾರ್ಪಣ ಮಾಡುವುದು. ಇದು ಮಾರ್ಗ ಕ್ರಿಯೆ. ಮಾರ್ಗಕ್ರಿಯೆ ಆಚಾರಪ್ರಧಾನವಾಗಿರುತ್ತದೆ. ಇದರಿಂದ ಮುಂದಿನ ಹಂತ ಮೀರಿದ ಕ್ರಿಯೆ. ಎಲ್ಲಾ ಕ್ರಿಯೆಗಳನ್ನು ಮೀರಿದ ಅರಿವಿನ ನೆಲೆಯಲ್ಲಿ ನಿಲ್ಲುವ ಸ್ಥಿತಿಯೇ ಕ್ರಿಯಾ ನಿಷ್ಪತ್ತಿ. ಅಲ್ಲಿ ಕಂಗಳು ತುಂಬಿದ ಬಳಿಕ ನೋಡಲಿಲ್ಲ, ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ. ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ. ಮನವು ತುಂಬಿದ ಬಳಿದ ನೆನೆಯಲಿಲ್ಲ. ಅರಿವು ನಿಷ್ಪತ್ತಿಯಾದ ಇಂಥ ಸ್ಥಿತಿಯನ್ನು ಪಡೆಯುವುದೇ ಲಿಂಗಾಂಗ ಯೋಗದ ಗುರಿ. ಆದರೆ ಇದನ್ನು ಇಷ್ಟಲಿಂಗ ಹಿಡಿದೇ ಮಾಡಬೇಕೇ ವಿನಾ ಬಿಟ್ಟು ಅಲ್ಲ. ಎಷ್ಟೇ ಉನ್ನತ ಸ್ಥಿತಿಗೆ ಹೋದರೂ ಇಷ್ಟಲಿಂಗವನ್ನು ಬಿಡಬಾರದು.

872. ದೇವನೊಲಿಮೆ ಎಲ್ಲರಿಗೂ ಲಭ್ಯ

ನೆಲನೊಂದೆ ಹೊಲೆಗೇರಿ ಶಿವಾಲಯಕ್ಕೆ,
ಜಲವೊಂದೆ ಶೌಚಾಚಮನಕ್ಕೆ,
ಕುಲವೊಂದೆ ತನ್ನ ತಾನರಿದವಂಗೆ,
ಫಲವೊಂದೆ ಷಡುದರುಶನ ಮುಕ್ತಿಗೆ,
ನಿಲವೊಂದೆ ಲಿಂಗದೇವಾ, ನಿಮ್ಮನರಿದವಂಗೆ. –ಬವದೀ. 874

ಶಿವಾಲಯ ಕಟ್ಟುವುದು ನೆಲದ ಮೇಲೆಯೇ ; ಹೊಲೆಗೇರಿ ಸೃಷ್ಟಿಯಾಗುವುದೂ ಈ ಭೂಮಿಯ ಮೇಲೆಯೇ ! ಶೌಚಾದಿ ಕಾರ್ಯಗಳಿಗೆ ಬಳಸುವ ನೀರೂ ಒಂದೆ ಪೂಜೆಗೆ, ಅಭಿಷೇಕಕ್ಕೆ ಬಳಸುವ ನೀರೂ ಒಂದೆ. ಅದೇ ರೀತಿ ತನ್ನ ತಾನರಿವ ಆತ್ಮಜ್ಞಾನವನ್ನು ಯಾರು ಪಡೆದುಕೊಳ್ಳುವರೋ ಅವರೆಲ್ಲರ ಕುಲವೂ ಒಂದೆ. ಷಡುದರುಶನಗಳ ಸಾಧನೆಯನ್ನು ಯಾರು ಮಾಡುವರೋ ಅವರಿಗೆ ಆಯಾ ದರ್ಶನದ ಫಲ ಲಭ್ಯವಾಗುತ್ತದೆ. ಪರಮಾತ್ಮ ಲಿಂಗದೇವನು ಪಕ್ಷಪಾತಿಯಲ್ಲ. ಅವನನ್ನು ಅರಿತು ಆರಾಧಿಸುವವರಿಗೆ ಅನುಗ್ರಹ ನೀಡುವನು. ಅವನನ್ನು ಅರಿತವರೆಲ್ಲರ ವ್ಯಕ್ತಿತ್ವ ಅಮೋಘ, ಉಪಮಾತೀತ ಮತ್ತು ಸಮಾನ.

873. ಶರಣರ ಸೇವೆಯ ಬೇಡಿಕೆ

ಮಧ್ಯಪಿಂಡಂಗಳೆಲ್ಲವೂ ಶಿವನಿದ್ದೆಡೆಯನರಿಯವು,
ಪೂರ್ವಪಿಂಡಂಗಳೆಲ್ಲವೂ ಶಿವನಾದ್ಯಂತವನರಿಯವು,
ಕಾಲಪಿಂಡಂಗಳೆಲ್ಲವೂ ಶಿವನ ನಿಲುಗಡೆಯನರಿಯದೆ
ಕಾಲಚಕ್ರದೊಳಗಾದುವೆಲ್ಲವು !
ಸಂಶಯಪಿಂಡಗಳೆಲ್ಲವ ಮರೆದು
ನಿಮ್ಮ ಶರಣರ ಸೇವೆಯಲ್ಲಿರಿಸಯ್ಯಾ, ಲಿಂಗದೇವಾ. –ಬವದೀ. 875

ಮಧ್ಯ ಪಿಂಡ, ಪೂರ್ವಪಿಂಡ, ಕಾಲಪಿಂಡ, ಸಂಶಯ ಪಿಂಡ ಎಂದು ಧರ್ಮಪಿತ ಬಸವಣ್ಣನವರು ಹೆಸರಿಸುತ್ತಾರೆ. ಪಿಂಡ ಎಂದರೆ ಜೀವ, ಜೀವಾತ್ಮ. ಮಧ್ಯ ಪಿಂಡ ಎಂದರೆ ಪೂರ್ಣ ಎಚ್ಚರಗೊಳ್ಳದ ಅರ್ಧ

ಎಚ್ಚರಗೊಂಡ ಆತ್ಮರುಗಳು ಎಂದು ಅರ್ಥ ಮಾಡಬಹುದು. ಪೂರ್ವಪಿಂಡ ಎಂದರೆ ಪೂರ್ಣ ಅಜ್ಞಾನ ಸ್ಥಿತಿಯಲ್ಲಿರುವ ಆತ್ಮರುಗಳು ಎಂದು ಊಹಿಸಬಹುದು. ಕಾಲ ಎಂದರೆ ಯಮ, ಸಾವು. ಕಾಲಪಿಂಡ ಎಂದರೆ ಸಾವಿಗೆ ಹೆದರುವವರು; ಇವರು ಪರಮಾತ್ಮನ ಸ್ವರೂಪವನ್ನರಿಯದೆ ಜನನ-ಮರಣಗಳ ಭವಚಕ್ರಕ್ಕೆ ಒಳಗಾಗುವರು. ಸಂಶಯ ಪಿಂಡ ಎಂದರೆ ಸದಾಕಾಲ ಸಂದೇಹ ಸಂಶಯ, ಸೂತಕ, ಮೈಲಿಗೆ, ಮೂಢನಂಬಿಕೆ ಇವುಗಳಲ್ಲಿ ತೊಳಲುವವರು. ಇವರೆಲ್ಲರೂ ದೇವರ ಸ್ವರೂಪವನ್ನು ಆದಿ-ಅಂತ್ಯವನ್ನು ಅರಿಯರು. ಇಂಥ ಸ್ಥಿತಿಯನ್ನು ಕೊಡದೆ ನಿಮ್ಮ ಶರಣರ ಸೇವೆಯಲ್ಲಿ ಇರಿಸಯ್ಯ ಎಂದು ಗುರು ಬಸವಣ್ಣನವರು ಲಿಂಗದೇವನಲ್ಲಿ ಬೇಡುವರು.

874. ಮಹಾನುಭಾವರ ಸಂಗ

ಪರಮ ತತ್ವದ ನಿಜಸಂಯುಕ್ತರ,
ಆನು ನೀನೆಂಬ ಶಬ್ದಸುಖಿಗಳ ತೋರಾ ಎನಗೆ,
ಮಹಾನುಭಾವರ ತೋರಾ ಎನಗೆ,
ಲಿಂಗೈಕ್ಯರ, ಲಿಂಗಸುಖಿಗಳ, ಲಿಂಗಗೂಡಾಗಿಪ್ಪವರ,
ಲಿಂಗಾಭಿಮಾನಿಗಳ ತೋರಾ ಎನಗೆ,
ಅಹೋರಾತ್ರಿಯಲ್ಲಿ ನಿಮ್ಮ ಶರಣರ ಸೇವೆಯಲ್ಲಿರಿಸು
ಲಿಂಗದೇವಾ. –ಬವದೀ. 876

ಸಂಯುಕ್ತ ಎಂದರೆ ಅಳವಡಿಸಿಕೊಂಡವನು. ಪರಮ ತತ್ತ್ವವಾದ ಪರಮಾತ್ಮನನ್ನು ಅಳವಡಿಸಿಕೊಂಡವನು, ಆನು ನೀನೆಂಬ ಶಬ್ದ ಸುಖಿ, ತಾನು ಇತರರು ಎಂಬ ಶಿಷ್ಟಾಚಾರವನ್ನರಿತು ಮೃದುವಾಗಿ ಎಲ್ಲರಿಗೂ ಹರ್ಷ ನೀಡುವಂತೆ ಮಾತನಾಡುವ ಶಬ್ದ ಸುಖಿ. ಜ್ಞಾನಿಗಳಾದ ಮಹಾನುಭಾವರು– ಇಂಥವರನ್ನೆಲ್ಲ ನನಗೆ ತೋರು ಎಂದು ಲಿಂಗದೇವನಲ್ಲಿ ಗುರು ಬಸವಣ್ಣನವರು ಬೇಡುತ್ತಾರೆ. ಲಿಂಗೈಕ್ಯರು, ಲಿಂಗಸುಖಿಗಳು, ಲಿಂಗಗೂಡಾಗಿಪ್ಪವರು, ಲಿಂಗಾಭಿಮಾನಿಗಳು ಎಂದು ಬಳಸುತ್ತಾರೆ. ಇವು ಶರಣರು ಸಾಧಿಸಿದ ವಿವಿಧ ಹಂತಗಳೆಂದು ಅರ್ಥಮಾಡಬಹುದು.

ಲಿಂಗಾಭಿಮಾನಿ ಎಂದರೆ ದೇವರನ್ನು ಕುರಿತು ನಂಬಿಕೆ, ಅಭಿಮಾನ ಇರುವ ಪ್ರಾಥಮಿಕ ಹಂತದ ಭಕ್ತ; ಲಿಂಗ ಗೂಡಾಗಿರುವವನೆಂದರೆ ದೇವನ ಪೂಜೆ-ಧ್ಯಾನ ಮಾಡುತ್ತ ತನ್ನ ಶರೀರವನ್ನು ಲಿಂಗದ ಗೂಡಾಗಿ ಮಾಡಿಕೊಂಡವನೆಂದರ್ಥ. ಲಿಂಗ ಸುಖಿ ಎಂದರೆ ದೇವನ ದಿವ್ಯ ಸಾಮರಸ್ಯವನ್ನು ಅನುಭವಿಸಿ, ಆನಂದಿಸಿದವನೆಂದು ಅರ್ಥ. ಲಿಂಗೈಕ್ಯನೆಂದರೆ ಭಾವಲಿಂಗೈಕ್ಯ ಸ್ಥಿತಿಯನ್ನು ಸಾಧಿಸಿ ಸದಾ ಲಿಂಗಾನಂದದಲ್ಲಿ ತಲ್ಲೀನನಾದವನೆಂದು ಅರ್ಥ.

ಯಾವುದೇ ಮಟ್ಟದ 'ದೇವಭಕ್ತ'ನಿರಲಿ ಅಂಥ ಶರಣರ ಸೇವೆಯಲ್ಲಿರಿಸು ಎಂದು ಗುರು ಬಸವಣ್ಣನವರು ಲಿಂಗದೇವನಲ್ಲಿ ಬೇಡುತ್ತಾರೆ.

875. ಸಜ್ಜನರ ಸಂಗದ ಫಲಶ್ರುತಿ

ಅಯ್ಯಾ, ಸಜ್ಜನ ಸದ್ಭಾವರ ಸಂಗದಿಂದ
ಮಹಾನುಭಾವರ ಕಾಣಬಹುದಯ್ಯಾ.
ಮಹಾನುಭಾವರ ಸಂಗದಿಂದ ಶ್ರೀಗುರುವನರಿಯಬಹುದು.
ಲಿಂಗವನರಿಯಬಹುದು, ಜಂಗಮವನರಿಯಬಹುದು
ಪ್ರಸಾದವನರಿಯಬಹುದು, ತನ್ನ ತಾನರಿಯಬಹುದು.
ಇದು ಕಾರಣ ಸದ್ಭಕ್ತರ ಸಂಗವನೇ ಕರುಣಿಸು
ಲಿಂಗದೇವಾ, ನಿಮ್ಮ ಧರ್ಮ! –ಬವದೀ. 877

ನಿರಂತರವಾಗಿ ಶರಣರ ಸಂಗದಲ್ಲಿ ಇರಬೇಕು. ಸಜ್ಜನರು, ಸದ್ಭಾವಿಗಳೂ ಆದ ಶರಣರ ಮಧ್ಯೆ ಮಹಾನುಭಾವಿಗಳು ಸಿಗುವರು. ಅವರ ಮಧ್ಯದಲ್ಲಿ ನಿಜಾನುಭಾವಿಯಾದ ಗುರುವು ಲಭ್ಯವಾಗುವನು. ಅಂಥ ಗುರುವಿನಿಂದ ಲಿಂಗದ ಸ್ವರೂಪ ತಿಳಿಯುವುದು. ನಿಜ ಜ್ಞಾನಿಗಳಾದ ಜಂಗಮರ ದರ್ಶನ ಪ್ರಾಪ್ತವಾಗುವುದು.

ಅದರ ಫಲಶ್ರುತಿಯಾಗಿ ಪ್ರಸಾದವು ಲಭ್ಯವಾಗುವುದು. ಪ್ರಸಾದವು ಕ್ರಿಯಾರೂಪದ್ದು ಮತ್ತು ಜ್ಞಾನರೂಪದ್ದು ಎರಡೂ ಆಗಿರುವುದು. ಈ ಅನುಗ್ರಹ(ಪ್ರಸಾದ)ದಿಂದ ತನ್ನ ತಾನರಿವ ಆತ್ಮಜ್ಞಾನ ಪ್ರಾಪ್ತವಾಗುವುದು.

ಅನುಭಾವಿಗಳ ಒಡನಾಟದಿಂದ ಇದೆಲ್ಲವೂ ಪ್ರಾಪ್ತವಾಗುವ ಕಾರಣ "ಸದ್ಭಕ್ತರ ಸಂಗವನ್ನು ಸದಾ ಕರುಣಿಸು ಲಿಂಗದೇವ" ಎಂದು ಗುರು ಬಸವಣ್ಣನವರು ಲಿಂಗದೇವನಲ್ಲಿ ಬೇಡುತ್ತಾರೆ.

876. ಮಹಾನುಭಾವರ ಸಂಗ

ಮರಮರ ಮಥನದಿಂದ ಅಗ್ನಿ ಹುಟ್ಟಿ
ಆ ಮರನೆಲ್ಲವ ಸುಡದಿಪ್ಪುದೆ?
ಮಹಾನುಭಾವರ ಸಂಗದಿಂದ ಜ್ಞಾನಾಗ್ನಿ ಹುಟ್ಟಿ
ಎನ್ನ ತನುಗುಣವೆಲ್ಲವ ಸುಡದಿಪ್ಪುದೆ?
ಇದು ಕಾರಣ, ಮಹಾನುಭಾವರ ತೋರಿಸು ಲಿಂಗದೇವಾ. –ಬವದೀ. 878

"ಬೇಸಿಗೆ ಕಾಲದಲ್ಲಿ ಮರಗಳ ಕೊಂಬೆಗಳು ಒಣಗಿ ಒಂದಕ್ಕೊಂದು ಘರ್ಷಿಸಿದಾಗ ಬೆಂಕಿಯು ಉತ್ಪತ್ತಿಯಾಗುವುದು. ಆ ಬೆಂಕಿಯು ಆ ಮರವನ್ನು ಸುಟ್ಟು ಹಾಕುತ್ತದೆ. ಅದೇ ರೀತಿ ಮಹಾನುಭಾವರ ಒಡನಾಟದಿಂದ ಜ್ಞಾನದ ಅಗ್ನಿಯು ಹುಟ್ಟಿ ಶರೀರ ಗುಣಗಳನ್ನು ಸುಟ್ಟು ಹಾಕುವುದು. ಆದ್ದರಿಂದ ಮಹಾನುಭಾವರ ಸಂಗವನ್ನು ನನಗೆ ಕರುಣಿಸು" ಎಂದು ದೇವರಲ್ಲಿ ಬೇಡುತ್ತಾರೆ ಗುರು ಬಸವಣ್ಣನವರು.

877. ಮನದ ಘನತೆ

ಅರಿದುದ ಅರಿಯಲೊಲ್ಲದು, ಅದೆಂತಯ್ಯಾ?
ಮರೆದುದ ಮರೆಯಲೊಲ್ಲದು, ಅದೆಂತಯ್ಯಾ?
ಅರಿದು ಮರೆದ ಮನವ
ಲಿಂಗದೇವಯ್ಯ ಬಲ್ಲ. –ಬವದೀ. 879

ಮನಸ್ಸು ಬಹಳ ಚಂಚಲವಾದುದು. ಯಾವುದನ್ನು ಅರಿಯಬೇಕೋ ಅದನ್ನು ಈ ಮನಸ್ಸು ಅರಿಯುವುದಿಲ್ಲ. ದಿವ್ಯ ಜ್ಞಾನವನ್ನು ಅದು ಹೊಂದಬೇಕು. ಅದಕ್ಕೆ ಮನಸ್ಸು ಮಾಡುವುದಿಲ್ಲ. ಮರೆಯಬೇಕಾದುದನ್ನು ಮರೆಯಬೇಕು. ರಾಗ–ದ್ವೇಷಗಳನ್ನು ಮಮಕಾರ–ಮೋಹಗಳನ್ನು ಮರೆಯಬೇಕು. ಅವನ್ನು ಮರೆಯದೆ ಪುನಃ ಪುನಃ ನೆನಪು ಮಾಡಿಕೊಳ್ಳುತ್ತದೆ. ಇದೇ ಮನವು ಘನಮನವಾದಾಗ ಮರೆಯಬೇಕಾದುದನ್ನು ಮರೆತು ಅರಿಯಬೇಕಾದುದನ್ನು ಅರಿಯುತ್ತದೆ ಮತ್ತು ಲಿಂಗದೇವನನ್ನು ಅರಿತು ಆನಂದಿಸುವ ಸ್ಥಿತಿಯನ್ನು ಹೊಂದಿ ಬಹಿರಂಗ ಪ್ರಜ್ಞೆಯನ್ನು ತೊರೆದು "ಮರೆವಿನ ಸ್ಥಿತಿಗೆ" ಬರುತ್ತದೆ. ಆದರೆ ಈ ಮರೆವು ಅಜ್ಞಾನದ ಮರೆವಲ್ಲ ಸುಜ್ಞಾನದ ಪೂರ್ಣತೆ.

878. ಸಹಜ ಅರ್ಪಣೆ

ಮೀಸಲು ಬೀಸರವಾದ ಪರಿಯ ನೋಡಾ:
ಕಾಲು ತಾಗಿದ ಅರ್ಘ್ಯವಣೆ, ಕೈ ಮುಟ್ಟಿದ ಅರ್ಪಿತ.
ಮನ ಮುಟ್ಟಿದ ಆರೋಗಣೆಯನೆಂತು ಘನವೆಂಬೆನಯ್ಯಾ?
ಬಂದ ಪರಿಯಲ್ಲಿ ಪರಿಣಾಮಿಸಿ, ನಿಂದ ಪರಿಯಲ್ಲಿ ನಿಜವ ಮಾಡಿ,
ಆನೆಂದ ಪರಿಯಲ್ಲಿ ಕೈಕೋ, ಲಿಂಗದೇವಾ. –ಬವದೀ. 880

ವಸ್ತುಗಳ ಮೀಸಲನ್ನು ಕಾಯ್ದುಕೊಳ್ಳುವುದು ಕಷ್ಟಸಾಧ್ಯ ಬಹು ಸೂಕ್ಷ್ಮವಾಗಿ ಮೀಸಲು ಕೆಟ್ಟುಹೋಗುತ್ತದೆ. ಮೀಸಲಾಗಿ ನೀರನ್ನು ತುಂಬಿಕೊಳ್ಳೋಣ ಎಂದರೆ ನದಿ, ಹಳ್ಳ, ಕೆರೆಗಳಲ್ಲಿ ಕಾಲಿಟ್ಟು ಮಧ್ಯದಲ್ಲಿ ನೀರು ತುಂಬಿಕೊಳ್ಳಬೇಕಾಗುತ್ತದೆ. ಮೀಸಲಿನಿಂದ ನೈವೇದ್ಯ ಮಾಡೋಣ ಎಂದರೆ ಕೈ ಮುಟ್ಟಿಬಿಡುತ್ತದೆ. ಅರ್ಪಣೆ ಮಾಡುವಾಗ ಮನಸ್ಸು ಮೊದಲು ಸ್ಪರ್ಶಿಸುತ್ತದೆ. ಹೀಗಾಗಿ ಮೀಸಲನ್ನು ಕಾಯ್ದುಕೊಳ್ಳಲು ಆಗುವುದಿಲ್ಲ. ಆದ್ದರಿಂದ ದೇವಾ, ಅದು ಯಾವ ಸ್ಥಿತಿಯಲ್ಲಿ ಬರುವುದೋ ಆ ಸ್ಥಿತಿಯಲ್ಲಿ ಅದನ್ನೇ ನಿಜವಾದ ಅರ್ಪಣೆಯೆಂದು ಭಾವಿಸಿ ನಾನು ಅರ್ಪಿಸುವ ರೀತಿಯಲ್ಲಿ ಸ್ವೀಕರಿಸು" ಎಂದು ಗುರು ಬಸವಣ್ಣನವರು ದೇವನಲ್ಲಿ ಪ್ರಾರ್ಥಿಸುತ್ತಾರೆ.

879. ಶರಣಾಗತಿಯ ಅರ್ಪಣೆ

ಹಾಲೆಂಜಲು ಪೆಯ್ಯನ, ಉದಕವೆಂಜಲು ಮತ್ಸ್ಯದ,
ಪುಷ್ಪವೆಂಜಲು ತುಂಬಿಯ.
ಎಂತು ಪೂಜಿಸುವೆನಯ್ಯಾ ಶಿವ ಶಿವಾ! ಎಂತು ಪೂಜಿಸುವೆ?
ಈ ಎಂಜಲವನತಿಗಳೆವಡೆ ಎನ್ನಳವಲ್ಲ.
ಬಂದುದ ಕೈಕೋ, ಲಿಂಗದೇವಾ. –ಬವದೀ. 881

ಮೀಸಲು ಕೆಡದಂತೆ ಹಾಲನ್ನು ದೇವನಿಗೆ ಅರ್ಪಣೆ ಮಾಡ(ಸ್ವೀಕರಿಸಬೇಕು)ಬೇಕು ಎಂದರೆ ಅದನ್ನು ಕರುವು ಎಂಜಲು ಮಾಡಿಬಿಡುತ್ತದೆ. ಕರುವು ಹಾಲನ್ನು ಕುಡಿಯದಿದ್ದರೆ ಹಸುವು ತೊರೆ(ಧಾರೆ)ಯನ್ನು ಬಿಡುವುದೇ ಇಲ್ಲ. ಹೀಗಾಗಿ ಹಾಲು ಕರುವಿನ ಎಂಜಲಾಗಿಯೇ ಬರುತ್ತದೆ. ನೀರನ್ನು ಅತ್ಯಂತ ಶುದ್ಧವಾಗಿ ಸಂಗ್ರಹಿಸಬೇಕೆಂದು ಪ್ರಯತ್ನಿಸಿದರೂ ನೀರಿನಲ್ಲಿಯೇ ಇರುವ ಮೀನು, ಕಪ್ಪೆ, ಆಮೆಯಂತಹ ಪ್ರಾಣಿಗಳು ಎಂಜಲು ಮಾಡುವುದಷ್ಟೆ ಅಲ್ಲ. ಮಲಮೂತ್ರ ವಿಸರ್ಜನೆಯನ್ನೂ ಮಾಡಿಬಿಡುತ್ತವೆ. ಹೂವುಗಳನ್ನು ಜೋಪಾನವಾಗಿ ಮಡಿಯಿಂದ ತರೋಣವೆಂದರೆ ತುಂಬಿಗಳು ಮಕರಂದವನ್ನು ಪಾನ ಮಾಡಲು ಬಂದು ಹೂವುಗಳನ್ನು ಎಂಜಲು ಮಾಡಿಬಿಡುತ್ತವೆ. ಮೈಲಿಗೆಯಾಗದೆ, ಎಂಜಲು ಮಾಡದೆ ಹೇಗೆ ಪೂಜಿಸುವುದು? ಈ ಎಂಜಲನ್ನು ನಿವಾರಿಸುವುದು ನನ್ನ ಅಳವಿಗೆ ಮೀರಿದ್ದು. ಆದ್ದರಿಂದ ಅವು ಇರುವ ಸ್ಥಿತಿಯಲ್ಲಿ ಲಿಂಗದೇವನೆ ಸಮರ್ಪಿಸಿಕೋ ಎಂದು ಲಿಂಗದೇವನಲ್ಲಿ ಪ್ರಾರ್ಥಿಸುತ್ತಾರೆ.

880. ಸಹಜ ನೈವೇದ್ಯ

ಶುದ್ಧವಾಯಿತ್ತೆಂಬೆನೆ ? ಸುಯಿಧಾನಿ ನಾನಲ್ಲ,
ಅನುವಾಯಿತ್ತೆಂಬೆನೆ ? ಅವಧಾನಿ ನಾನಲ್ಲ,
ಸುಯಿಧಾನ ಅವಧಾನ ಅರ್ಪಿತವ ನಾನರಿಯೆ
ಇದ್ದ ಪರಿಯಲಿ ನೀಡಿದಡೆ,
ಬಂದ ಪರಿಯಲ್ಲಿ ಕೈಕೋ ಲಿಂಗದೇವಾ. –ಬವದೀ. 882

ನಾನು ಅರ್ಪಿಸುವುದು ಶುದ್ಧವಾಗಿದೆ. ಎಂದುಕೊಳ್ಳಲೇ, ಸುಯಿಧಾನಿ ನಾನಲ್ಲ. ಸುಯಿಧಾನಿ ಅಂದರೆ ಸಂತೃಪ್ತಿಯುಳ್ಳವನು ಎಂದರ್ಥ. ಎಲ್ಲ ಪದಾರ್ಥಗಳೂ ಅನುವಾಗಿ ನಾನು ಪರಿಪೂರ್ಣ ಪೂಜೆಯನ್ನು ಮಾಡಿದ್ದೇನೆ ಎಂದುಕೊಳ್ಳಲೇ ? ಅವಧಾನಿ ನಾನಲ್ಲ. ಅವಧಾನಿ ಅಂದರೆ ಜಾಗೃತವಾಗಿದ್ದುಕೊಂಡು ಅರ್ಪಿಸುವವನು. ಸಂತೃಪ್ತಿಯಿಂದ ಅರ್ಪಿಸುವುದೂ ನನಗೆ ತಿಳಿಯದು, ಎಚ್ಚರಿಕೆಯಿಂದ ಅರ್ಪಿಸುವುದೂ ತಿಳಿಯದು. ಆದ್ದರಿಂದ ನನಗೆ ಸಾಧ್ಯವಾಗುವ ಪರಿಯಲ್ಲಿ ನಾನು ಅರ್ಪಿಸುತ್ತಿದ್ದೇನೆ. ಅದು ಬಂದ ಸ್ಥಿತಿಯಲ್ಲಿ ನೀನು ಸ್ವೀಕರಿಸು ಲಿಂಗದೇವಾ ? ಎಂದು ಗುರು ಬಸವಣ್ಣನವರು ಲಿಂಗದೇವನಲ್ಲಿ ಪ್ರಾರ್ಥಿಸುತ್ತಾರೆ.

881. ಮುಯ್ಯಿಗೆ ಮುಯ್ಯಿ ಬೇಡ

ಪಾದಾರ್ಚನೆಯ ಮಾಡುವೆನಯ್ಯಾ, ಪಾದೋದಕದ ಹಂಗಿಗೆ.
ಶರಣಾರ್ಥಿಯೆಂಬೆನಯ್ಯಾ ಒಕ್ಕುದ ಕೊಂಬ ಹಂಗಿಗೆ !
ಎಡೆಯಾಟ ಕಡಬಡ್ಡಿಯ ಕೊಟ್ಟು ಕೆಟ್ಟಿತ್ತು ನೋಡಾ, ಭಕ್ತಿ !
ಲಿಂಗದೇವನ ಶರಣರ ನಿಲವನರಿಯದೆ,
ಮುಯ್ಯಿಗೆ ಮುಯ್ಯಾಗಿ ಕೆಟ್ಟಿತ್ತಯ್ಯಾ ಎನ್ನ ಭಕ್ತಿ ! –ಬವದೀ. 883

ಪಾದೋದಕವನ್ನು ಪಡೆದುಕೊಂಡು ಕೃತಾರ್ಥನಾಗಬೇಕು. ಎಂಬ ಸ್ವಾರ್ಥ(?)ದಿಂದ ಜಂಗಮರ, ಶರಣರ ಪಾದಾರ್ಚನೆಯನ್ನು ಮಾಡುತ್ತೇನೆ. ಒಕ್ಕ ಪ್ರಸಾದವನ್ನು ಸ್ವೀಕರಿಸಬೇಕೆಂಬ ಆಸೆಯಿಂದ ಜಂಗಮರು, ಶರಣರನ್ನು ಕಂಡ ತಕ್ಷಣ ಶರಣಾರ್ಥಿ ಎಂದು ಶರಣು ಮಾಡುತ್ತೇನೆ. ಶರಣನ ಭಕ್ತಿ ಕಡಬಡ್ಡಿಯ ಕೊಡುವುದರಿಂದ ಪತನಗೊಳ್ಳುವುದು. ಹಣದ ದಾಹ ಹೆಚ್ಚಾದಂತೆ ಬಡ್ಡಿಯ ಪ್ರಮಾಣವನ್ನು ಹೆಚ್ಚು ಮಾಡುವನು. ಸಾಲವನ್ನು ವಸೂಲಿ ಮಾಡಲು ಮಾನಸಿಕವಾಗಿ ಹಿಂಸಿಸಬಹುದು, ದೈಹಿಕವಾಗಿ ಹಿಂಸಿಸಬಹುದು. ಶರಣರ ವ್ಯಕ್ತಿತ್ವವನ್ನು

ಅರಿಯದೆ ಸಾಲಗಾರನೆಂದು ಅವನನ್ನು ಹಿಂಸಿಸಿ, ಮುಯ್ಯಿ (ಸೇಡು) ತೀರಿಸಿಕೊಳ್ಳಬಹುದು. ಇದರಿಂದ ಭಕ್ತಿಯ ನೈತಿಕತೆ ಕೆಡುವುದು.

882. ಕರ್ಮ–ಭಕ್ತಿ–ಜ್ಞಾನಕಾಂಡಕ್ಕತೀತ (ಪುನರ್‍ರಚಿಸಿದ ವಚನ)

"ಯಸ್ಯ ಕ್ರಿಯಾ ತಸ್ಯ ಭವತಿ" ಎಂದು ಕಟ್ಟಾಚಾರದಲ್ಲಿ ಇದ್ದು
ಅನುಸರಿಸಿಕೊಂಡು ನಡೆವ ಕರ್ಮಕಾಂಡಿಯಲ್ಲ
ಉತ್ಪತ್ತಿ–ಸ್ಥಿತಿ–ಭೋಗ–ಭುಕ್ತಿಯುಳ್ಳ ಭಕ್ತಿಕಾಂಡಿಯಲ್ಲ
ಪರವು ಸಾಧ್ಯವಾಯಿತ್ತೆಂದು ಕ್ರೀಯೆಲ್ಲವ ಮೀರಿ ನಡೆವ,
ಪರತತ್ತ್ವವನರಿದೆನೆಂಬ ಜ್ಞಾನಕಾಂಡಿಯಲ್ಲ
ಇನ್ನು ಕರ್ಮಕಾಂಡ, ಭಕ್ತಿಕಾಂಡ, ಜ್ಞಾನಕಾಂಡ–
ಈ ತ್ರಿವಿಧದಲ್ಲಿ ವಂಚಕನಾದಡೆ
ಈಸು ವಿಧದೊಳಗೆ ಲಿಂಗವಿಲ್ಲ. ಮೇಲೆ ಸತ್ಪುರುಷರ ಸಂಗವಿಲ್ಲ
ಯುಕ್ತಿಯಿಲ್ಲ, ಎನಗೆ ಭಕ್ತಿಯೆಂತಹುದಯ್ಯಾ ?
ಬಲ್ಲವರ ಬೆಸಗೊಂಡಡೆ ಎನ್ನ ಬಿಮ್ಮು ಕೆಟ್ಟಿಹುದೆಂದು
ಮೆಲ್ಲನೆ ಪ್ರಸಂಗದಿಂದ ತಿಳಿದು ನೋಡುವೆ.
ಲಿಂಗದೇವಾ, ಎನ್ನ ಅವಗುಣವ ನೋಡದೆ
ಶಿವರಾತ್ರಿಯ ಸಂಕಣ್ಣಗಳಿಗೆ ಕರುಣಿಸಿದಂತೆ
ಎನಗೆ ಕೃಪೆ ಮಾಡಯ್ಯಾ –ಬವದೀ. 883

ಸಾಂಪ್ರದಾಯಿಕವಾಗಿ ಹಿಂದು ಧರ್ಮದಲ್ಲಿ ಮೂರು ಮಾರ್ಗಗಳಿವೆ. ಅವು ಕರ್ಮಯೋಗ, ಭಕ್ತಿಯೋಗ ಮತ್ತು ಜ್ಞಾನಯೋಗ. ಇವುಗಳಲ್ಲಿ ಒಂದು ವಿಶೇಷ ಗುಣವಿದ್ದರೆ ಮತ್ತೊಂದು ಲೋಪವಿರುತ್ತದೆ. ಕರ್ಮಕಾಂಡದಲ್ಲಿ ಹೋಮ–ಹವನ, ಯಜ್ಞ–ಯಾಗಗಳಂತಹ ಕರ್ಮಪ್ರಧಾನ ಆಚರಣೆ ಇರುತ್ತದೆ. ಕರ್ಮಯೋಗದಲ್ಲಿ ಶರೀರ ಪ್ರಧಾನವಾದ ಸಾಧನೆ ಇರುತ್ತದೆ. ಕಟ್ಟುನಿಟ್ಟಾದ ಆಚರಣೆಗೆ ಇಲ್ಲಿ ಪ್ರಾಧಾನ್ಯವಿರುತ್ತದೆಯೇ ವಿನಾ ಭಕ್ತಿಗಾಗಲಿ ಜ್ಞಾನಕ್ಕಾಗಲಿ ಹೆಚ್ಚಿನ ಅವಕಾಶವಿರುವುದಿಲ್ಲ. ಇನ್ನು ಭಕ್ತಿಕಾಂಡದಲ್ಲಿ ಭಕ್ತಿಯು ಪ್ರಧಾನವಾಗಿರುವುದೇ ವಿನಾ ಜ್ಞಾನವಾಗಲಿ, ಕ್ರಿಯೆಯಾಗಲಿ ಅಲ್ಲ. ಜ್ಞಾನಕಾಂಡದಲ್ಲಿ ಜ್ಞಾನವು ಮುಖ್ಯವಾಗಿ ಇಲ್ಲಿ ಭಕ್ತಿ, ಕ್ರಿಯೆಗಳು ಗೌಣವಾಗುತ್ತವೆ. ಹೀಗಾಗಿ ಈ ಯೋಗಗಳೆಲ್ಲ ಏಕಮುಖವಾಗಿರುತ್ತವೆ. ಈ ಮಾರ್ಗಗಳು ಗುರು ಬಸವಣ್ಣನವರಿಗೆ ರುಚಿಸುವುದಿಲ್ಲ. ಏಕೆಂದರೆ ಇವುಗಳಲ್ಲಿ ದೇವರಲ್ಲಿ ನಂಬಿಕೆಯಿಲ್ಲ, ದೇವರ ಸ್ವರೂಪದ ಜ್ಞಾನವಿಲ್ಲ. ಇಷ್ಟಲಿಂಗ ಧಾರಣೆ ಇಲ್ಲ. ಇಷ್ಟಲಿಂಗ ನಿಷ್ಠೆಯಿಲ್ಲ, ಧಾರ್ಮಿಕ ಸಹೋದರತ್ವ ಇಲ್ಲ. ಹೆಚ್ಚಿನ ಸಾಧನೆಯಿಲ್ಲ. ಹೀಗಾಗಿ ಇವು ಇಷ್ಟವಾಗವು. ತಿಳಿದವರನ್ನು ಕೇಳಿದರೆ ಅಹಂಕಾರಕ್ಕೆ ಚ್ಯುತಿ ಬರುವುದೆಂದು ಪರೋಕ್ಷವಾಗಿ ಮಾತನಾಡಿಸಿ ತಿಳಿದುಕೊಳ್ಳುತ್ತೇನೆ.

ಲಿಂಗದೇವಾ ನನ್ನಲ್ಲಿರುವ ದುರ್ಗುಣಗಳನ್ನು ಗಮನಿಸದೆ ಶಿವರಾತ್ರಿ ಸಂಕಣ್ಣಗಳಿಗೆ ಕರುಣಿಸಿದಂತೆ ನನ್ನನ್ನು ಅನುಗ್ರಹಿಸು ಎಂದು ಗುರು ಬಸವಣ್ಣನವರು ದೇವರಲ್ಲಿ ಬೇಡುತ್ತಾರೆ.

883. ಜ್ಞಾನವನ್ನು ನೀಡು.

ಕಳಾಬಿಂದು ವಟಾಮುಖಿಯೆಂಬ ಹೆಂಗೂಸಿನ ಕೈಯಲು
ಜಲಾಕಾರವೆಂಬ ಗಡಿಗೆಯಿದ್ದಿತ್ತು.
ಆ ಗಡಿಗೆಯಲ್ಲಿ ಚೆನ್ನಬಸವಣ್ಣ ನೀರ ತಂದ.
ಮಡಿವಾಳಯ್ಯ ಸಯಿದಾನವ ತಂದ,
ಇದರ ಒಲೆಯಡಿಯನುರುಹಿ ಕೊಡಾ ಲಿಂಗದೇವಾ.' –ಬವದೀ. 885

"ಕಳೆ ಮತ್ತು ಬಿಂದುಗಳಿಂದ ಶೋಭಿತವಾದ ಮುಕ್ತಿ ಎಂಬ ಹೆಣ್ಣಿನ ಕೈಯಲ್ಲಿ ಸಾಧನೆ ಎಂಬ ಗಡಿಗೆ ಇದ್ದಿತ್ತು. ಅದರಲ್ಲಿ ಚನ್ನಬಸವಣ್ಣ ಭಕ್ತಿ ಎಂಬ ನೀರು ತಂದ ; ಮಡಿವಾಳ ಮಾಚಿದೇವರು ಚೈತನ್ಯ ಎಂಬ

ಸಾಮಗ್ರಿ(ಸಯದಾನ) ಹಾಕಿದರು. ಇದು ಪಕ್ವವಾಗಲು ಬೇಕಾದ ಜ್ಞಾನದ ಅಗ್ನಿಗೆ ನೀನು ಪುಟವಿಕ್ಕಿಕೊಡು ಲಿಂಗದೇವಾ"

884. ದೀವಿಗೆಯ ಬೆಳಕು ಮನೆಯ ಸುಡಬಾರದು

ದಿಟವ ಮಾಡಿ ಪೂಜಿಸಿದಡೆ ಸಟೆಯ ಮಾಡಿ ಕಳೆವೆ.
ಸಟೆಯ ಮಾಡಿ ಪೂಜಿಸಿದಡೆ ದಿಟವ ಮಾಡಿ ಕಳೆವೆ!
ಏನೆಂಬೆ ? ಎಂತೆಂಬೆ ?
ಸುಖಕ್ಕೆ ತುಂಬಿದ ದೀವಿಗೆ ಮನೆಯೆಲ್ಲವ ಸುಟ್ಟಂತೆ,
ಆನು ಮಾಡಿದ ಭಕ್ತಿ ಎನಗಿಂತಾಯಿತ್ತು, ಲಿಂಗದೇವಾ. –ಬವದೀ. 886

ಊಹೆ ಮತ್ತು ಲೆಕ್ಕಾಚಾರಗಳು ಎಷ್ಟೋ ಬಾರಿ ತಿರುಗುಮುರುಗಾಗುವುವು. ದೇವಾ, ನಿನ್ನ ಲೀಲೆ ವಿಚಿತ್ರ, ಜಂಗಮನೊಬ್ಬನನ್ನು ನಿಜ ಜ್ಞಾನಿಯೆಂದು ಉನ್ನತ ವ್ಯಕ್ತಿತ್ವ ಉಳ್ಳವನೆಂದು ಪೂಜಿಸುತ್ತೇನೆ ನಂತರ ಅದು ಸಟೆ. ಅವನಲ್ಲಿ ಅಂಥ ವ್ಯಕ್ತಿತ್ವವಿಲ್ಲ ಎಂಬುದು ತಿಳಿದು ವಿಷಾದವೆನಿಸುತ್ತದೆ. ನಿರಾಶೆಯಾಗುತ್ತದೆ. ಮತ್ತೊಬ್ಬ ಸಾಮಾನ್ಯ ಜಂಗಮನೆಂದು ಭಾವಿಸುತ್ತೇನೆ. ಅವನೋ ವ್ಯಕ್ತಿತ್ವ ದೃಷ್ಟಿಯಿಂದ ಉನ್ನತ ನಿಲುವಿನ ಅನುಭಾವಿಯಾಗಿರುತ್ತಾನೆ. ಏನು ಮಾಡುವುದು ? ಹೇಗೆ ತಿಳಿದುಕೊಳ್ಳುವುದು ? ಮನೆಗೆ ಬೆಳಕು ನೀಡಲಿ ಎಂದು ಹಚ್ಚಿಟ್ಟ ದೀವಿಗೆ ಅಕಸ್ಮಾತ್ ಮನೆಯೇ ಸುಡಲು ಕಾರಣವಾದರೆ ಎಂಥಾ ದುರ್ದೈವ. ಹಾಗೆ ನನ್ನ ಭಕ್ತಿಯು ಸಹ ನನಗೇ ಮುಳುವಾದರೆ ಹೇಗೆ ?

885. ಮನವೇ ಇಲ್ಲ.

ಎಂಬತ್ತೆಂಟು ಪವಾಡವ ಮೆರೆದು
ಹಗರಣದ ಚೋಹದಂತಾಯಿತ್ತೆನ್ನ ಭಕ್ತಿ !
ತನುವಿನೊಳಗೆ ಮನ ಸಿಲುಕದೆ
ಮನದೊಳಗೆ ತನು ಸಿಲುಕದೆ,
ತನು ಅಲ್ಲಮನಲ್ಲಿ ಸಿಲುಕಿತ್ತು,
ಮನ ಚೆನ್ನಬಸವಣ್ಣನಲ್ಲಿ ಸಿಲುಕಿತ್ತು!
ನಾನೇತರಲ್ಲಿ ನೆನೆವೆನಯ್ಯಾ, ಲಿಂಗದೇವಾ. –ಬವದೀ. 887

ಎಂಬತ್ತೆಂಟು ಪವಾಡಗಳನ್ನು ಮಾಡಿ ಕೀರ್ತಿಯನ್ನು ಹೆಚ್ಚಿಸಿಕೊಂಡು ವೃಥಾ ವೇಷಧಾರಿಯ ಹಗರಣದಂತಾಯಿತ್ತು ನನ್ನ ಭಕ್ತಿ. ಮನಃ ಪೂರ್ವಕವಾಗಿ ನಿನ್ನನ್ನು ನೆನೆಯಬೇಕು. ಏನು ಮಾಡಲಿ ತನುವಿನೊಳಗೆ ಮನವು ನಿಲ್ಲುತ್ತಿಲ್ಲ. ಮನವಿರುವ ಕಡೆ ತನು ನಿಲ್ಲುತ್ತಿಲ್ಲ. ನನ್ನ ಶರೀರ ಅಲ್ಲಮನನ್ನು ಆರಾಧಿಸುವುದರಲ್ಲಿ, ಆತನ ಸೇವೆ ಮಾಡುವುದರಲ್ಲಿ ಆಸಕ್ತವಾಗಿದೆ. ಮನಸ್ಸೋ ಚನ್ನಬಸವಣ್ಣನನ್ನು ಮೆಚ್ಚಿಕೊಂಡು ಆ ಮೆಚ್ಚುಗೆಯನ್ನು ತುಂಬಿಕೊಂಡಿದೆ. ಅಂದಾಗ ನಿನ್ನನ್ನು ಹೇಗೆ ನೆನೆಯಲಿ?

ಅಲ್ಲಮಪ್ರಭು, ಚನ್ನಬಸವಣ್ಣನವರನ್ನು ಮೆಚ್ಚಿಕೊಂಡು ತಮ್ಮನ್ನು ತಾವು ನಿಂದಿಸಿಕೊಳ್ಳುವ ಮನೋಭಾವವನ್ನು ಈ ವಚನದಲ್ಲಿ ಕಾಣುತ್ತೇವೆ.

886. ಸಾಧನಾ ಪಥ

ಭಕ್ತನೆನಿಸುವೆನಯ್ಯಾ ಮೆಲ್ಲಮೆಲ್ಲನೆ,
ಯುಕ್ತನೆನಿಸುವೆನಯ್ಯಾ ಮೆಲ್ಲಮೆಲ್ಲನೆ,
ಶರಣನೆನಿಸುವೆನಯ್ಯಾ ಮೆಲ್ಲಮೆಲ್ಲನೆ!
ಎಡಹುಗುಳಿಗಳ ದಾಂಟಿ ಬರಬರ ಲಿಂಗೈಕ್ಯನೆನಿಸುವೆನಯ್ಯಾ.
ಲಿಂಗದೇವಾ, ನಿಮ್ಮಿಂದಧಿಕನೆನಿಸುವೆನಯ್ಯಾ ! –ಬವದೀ. 888

ಸಾಧನೆಯ ವೇಗ ಆರಂಭಿಕ ಹಂತದಲ್ಲಿ ನಿಧಾನಗತಿಯದ್ದಾಗಿರುತ್ತದೆ. ಭಕ್ತನಾಗುವುದು ಮೊದಲ ಹಂತ. ನಂತರ ತತ್ತ್ವಗಳನ್ನು ಒಂದೊಂದಾಗಿ ತಿಳಿದುಕೊಂಡು ಯುಕ್ತನಾಗಬೇಕು. ಭಕ್ತ ಸ್ಥಲಕ್ಕೆ ಬರುವುದು ಶಾಲೆಯಲ್ಲಿ

ಪ್ರವೇಶ ಪಡೆದಂತೆ ನಂತರ ಪಠ್ಯಗಳ ಓದುವಿಕೆ. ಜ್ಞಾನವನ್ನು ಪಡೆದುಕೊಳ್ಳುತ್ತ ಸದ್ಗುಣಗಳನ್ನು ಅಳವಡಿಸಿಕೊಂಡು ಶರಣನಾಗಬೇಕು. ಆ ಹಂತದ ನಂತರ ಲಿಂಗೈಕ್ಯದ ಅನುಭವ, ಸ್ಥಿತಿ ಸುಲಭವಾಗುವುದು. "ಲಿಂಗೈಕ್ಯದ ಮಾನಸಿಕ ಸ್ಥಿತಿಯನ್ನು ಪಡೆದು, ನಿಮ್ಮೊಡನೆ ಒಂದಾಗಿ, ನಿಮ್ಮಿಂದ ಅಧಿಕನೆನಿಸುತ್ತೇನೆ" ಎಂದು ಆನಂದೋನ್ಮಾದದಲ್ಲಿ ಗುರು ಬಸವಣ್ಣನವರು ಹೇಳುತ್ತಾರೆ.

887. ನಾನೊಬ್ಬನೇ ಭಕ್ತ

'ಬಸವ ಬಾರೈ, ಮರ್ತ್ಯಲೋಕದೊಳಗೆ ಭಕ್ತರುಂಟೆ ? ಹೇಳಯ್ಯಾ'
ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ.
ನಾನೊಬ್ಬನೆ ಭಕ್ತನು, ಮರ್ತ್ಯಲೋಕದೊಳಗಣ ಭಕ್ತರೆಲ್ಲರೂ
ಜಂಗಮ-ಲಿಂಗ ನೀನೇ ಅಯ್ಯಾ! ಲಿಂಗದೇವಾ. –ಬವದೀ. 889

ಬಹುಶಃ ಗುರು ಬಸವಣ್ಣನವರಿಗೆ ಯಾರೋ ಪ್ರಶ್ನೆ ಕೇಳಿರಬಹುದು ಹೀಗೆ. "ಬಸವಣ್ಣಾ, ಮರ್ತ್ಯಲೋಕದೊಳಗೆ ಶ್ರೇಷ್ಠ ಭಕ್ತರು ಯಾರು ?" ಗುರು ಬಸವಣ್ಣನವರು ಈ ಪ್ರಶ್ನೆಯನ್ನು ಹಾಕಿಕೊಂಡು ಉತ್ತರವನ್ನು ನೀಡುತ್ತಾರೆ." ಮತ್ತಾರು ಇಲ್ಲಯ್ಯಾ ಮತ್ತಾರು ಇಲ್ಲಯ್ಯಾ, ಮತ್ತಾರು ಇಲ್ಲಯ್ಯಾ, ನಾನೊಬ್ಬನೇ ಭಕ್ತನು." ಬಹುಶಃ ಈ ಉತ್ತರವನ್ನು ಕೇಳುತ್ತಲೇ ಗುರುಬಸವಣ್ಣನವರಿಗೆ ಎಷ್ಟು ಅಹಂಕಾರ ಬಂದಿತೆಂದು ಕೆಲವರ ಕಣ್ಣು ಕೆಂಪಗಾಗಿರಬಹುದು. ಗುಸುಗುಸು ಪ್ರಾರಂಭವಾಗಿರಬಹುದು. ಆಗ ಮುಂದುವರಿದು ಧರ್ಮಪಿತರು ಹೇಳುತ್ತಾರೆ, "ನಾನಿನ್ನೂ ವಚನವನ್ನು ಪೂರ್ತಿ ಮಾಡಿಲ್ಲ ; ಪೂರ್ತಿ ಕೇಳಿರಿ. ನಾನೊಬ್ಬನೇ ಭಕ್ತ ; ಮರ್ತ್ಯಲೋಕದೊಳಗಣ ಭಕ್ತರೆಲ್ಲರೂ ಜಂಗಮಲಿಂಗ ನೀನೆ ಅಯ್ಯಾ"

ಇದರಲ್ಲಿ ಬಹುದೊಡ್ಡ ಸಂದೇಶವಿದೆ. ಪ್ರತಿಯೊಬ್ಬ ವ್ಯಕ್ತಿಯು ತಾನು ಭಕ್ತನೆಂದು ಸೇವಕನೆಂದು, ಉಳಿದವರೆಲ್ಲ ಜಂಗಮಲಿಂಗ–ಪರಮಾತ್ಮನ ಸಾಕಾರ ರೂಪವೆಂದು ಸೇವ್ಯರೆಂದು ಭಾವಿಸಬೇಕು. ವ್ಯಕ್ತಿಗಿಂತ ಸಮಾಜ ಶ್ರೇಷ್ಠ. ವ್ಯಷ್ಟಿಗಿಂತಲೂ ಸಮಷ್ಟಿ ಹಿರಿದು" ಈ ಮನೋಭಾವ ಬಂದರೆ ಸೇವೆ ಮಾಡುವವರ ಸಂಖ್ಯೆ ಹಿರಿದಾಗುತ್ತದೆ. ಸೇವೆ ಮಾಡಿಸಿಕೊಳ್ಳಬೇಕೆಂಬುವವರ ಸಂಖ್ಯೆ ಕಿರಿದಾಗುತ್ತದೆ. ವಿನಯ ಭಾವ ಎಲ್ಲರಲ್ಲಿ ಅಳವಡುತ್ತದೆ.

888. ಇನ್ನು ಆಚರಿಸುವುದಿಲ್ಲ.

ಪರಮಪ್ರಭುವೇ, ನೀ ಮುನಿದೆನ್ನ ಮರ್ತ್ಯಲೋಕದೊಳಗಿರಿಸಿದಡೆ
ಆನು ಸೈರಿಸಿದೆನಯ್ಯಾ.
ಕುಲಮದ ಛಲಮದವಿದೇನಯ್ಯಾ? ದರುಶನಭ್ರಾಂತಿಯಿದೇನಯ್ಯಾ?
ಕ್ರಿಯಾಕರ್ಮ ಸೂತಕವಿದೇನಯ್ಯಾ?
ಇಂತೆಂಬುದ ಮೀರಿದೆನಾಗಿ, ಲಿಂಗಯ್ಯಾ ನಿಮ್ಮ ನಂಬಿದೆನಯ್ಯಾ.
ಇನ್ನು ಕಲಿಯುಗದಲ್ಲಿ ಬಳಸಿದಡೆ
ಲಿಂಗದೇವಾ, ಎನ್ನ ರಾಣಿವಾಸದಾಣೆ! –ಬವದೀ. 890

ಪರಮಾತ್ಮಾ, ಈ ಭವಕ್ಕೆ ನನ್ನನ್ನು ಏಕೆ ತಂದೆ? ನನ್ನ ಮೇಲಿನ ಕೋಪದಿಂದಲೇ ಈ ಮರ್ತ್ಯಲೋಕದಲ್ಲಿ ಹುಟ್ಟಿಸಿದ್ದೀಯ. ಆದರೂ ನಾನು ಸೈರಿಸಿದೆನು. ಆದರೆ ಕುಲಮದ, ಛಲಮದ ಮಾತ್ರ ಕೊಡಬೇಡ. ನಾನು ಶ್ರೇಷ್ಠಕುಲದಲ್ಲಿ ಹುಟ್ಟಿದವನೆಂಬ ಹಮ್ಮು ಬಂದು ಇನ್ನಿತರ ಶರಣರನ್ನು ಕೀಳಾಗಿ ಕಾಣುವಂತಹ ಮನೋಭಾವ ಬರದೆ ಇರಲಿ. ಅದೇ ರೀತಿ ಛಲಮದವು ಸೋಂಕದಿರಲಿ. ನಾನು ಹೇಳಿದ್ದು ತಪ್ಪಾಗಿದ್ದರೂ ಅದನ್ನೇ ಸರಿ ಎಂದು ಛಲದಿಂದ ಹೋರಾಡುವ ಧಾರ್ಷ್ಟ್ಯ ಬೇಡ. ಅದೇ ರೀತಿ ಷಡುದರುಶನಗಳ ಮೋಹ ನನ್ನಲ್ಲಿ ಬರದೆ ಇರಲಿ. ವೈದಿಕ ಮಾರ್ಗದ ಕ್ರಿಯಾ ಕರ್ಮಗಳ ಸೂತಕ (ಹೋಮ–ಹವನ, ಯಜ್ಞ–ಯಾಗ, ಶ್ರಾದ್ಧಾದಿ ಕರ್ಮಗಳು, ಪಂಚ ಸೂತಕ) ನನ್ನನ್ನು ಸೋಂಕದಿರಲಿ.

.ಇಂತಿವೆಲ್ಲವನ್ನು ಮೀರಿ ಲಿಂಗದೇವಯ್ಯಾ, ನಿಮ್ಮನ್ನು ದೃಢವಾಗಿ ನಂಬಿದ್ದೇನೆ. ಇನ್ನು ಎಂಥದೇ ಪ್ರಸಂಗದಲ್ಲಿ ಇವನ್ನು ಬಳಸುವುದಿಲ್ಲ. ನನ್ನ ಹೆಂಡತಿಯ ಆಣೆಯಾಗಿಯೂ !

889. ದೃಢ ನಂಬಿಕೆ

ತನುಮನಧನವೆಂಬ ಕನ್ನಡಿ ನೋಡಯ್ಯಾ,
ಎನ್ನದೂ ಅಲ್ಲ, ನಿನ್ನದೂ ಅಲ್ಲ, ಬರಿಯ ಭ್ರಮೆಯ ಮಾತು.
ಆ ಭ್ರಮೆಗೊಳಗಾಗಿ, ನಿಮ್ಮ ಶ್ರೀಚರಣವ ಬಿಡೆ ಲಿಂಗದೇವಾ. –ಬವದೀ. 891

ತನುಮನಧನ ದೇವರು ಕೊಟ್ಟ ಮೂರು ಸಂಪತ್ತು. ಇವು ಕನ್ನಡಿಯಂತಿವೆ. ಕನ್ನಡಿ ಹೇಗೆ ನಮ್ಮ ಮುಖದ ಓರೆಕೋರೆಗಳನ್ನು ಸುರೂಪ–ಕುರೂಪಗಳನ್ನು ತೋರಿಸುವುದೋ ಹಾಗೆ ಇವು ನಮ್ಮ ಸತ್ವ ಪರೀಕ್ಷೆ ಮಾಡುತ್ತವೆ. ಆದರೆ ದೇವಾ, ಇವನ್ನು ನನ್ನವು ಎನ್ನಲೆ ? ನಿನಗೆ ಅರ್ಪಿಸಿ ಬಿಟ್ಟಾಗಿದೆ. ನಿನ್ನವು ಎನ್ನಲೇ ಭೌತಿಕವಾದ ಜಗತ್ತಿನಲ್ಲಿ ನನ್ನ ವಸ್ತುಗಳಾಗಿವೆ. ಏನು ಆದರೂ ಅದು ಭ್ರಮೆಯೇ ಆಗುತ್ತದೆ. ನಾನು ಭ್ರಮೆಗೊಳಗಾಗುವುದಿಲ್ಲ. ನಿಮ್ಮ ಶ್ರೀ ಚರಣವನ್ನು ದೃಢವಾಗಿ ಹಿಡಿಯುತ್ತೇನೆ.

890. ಷಡುಸ್ಥಲದ ಸಾಧನೆ

ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣನೈಕ್ಯನು
ಮೆಲ್ಲ ಮೆಲ್ಲನೆ ಆದಹೆನೆಂಬನ್ನಬರ ನಾನೇನು ವಜ್ರದೇಹಿಯೆ?
ನಾನೇನು ಅಮೃತವ ಸೇವಿಸಿದೆನೆ?
ಆನು ಮರುಜೀವಣಿಯ ಕೊಂಡೆನೆ?
ನುಡಿದ ನುಡಿಯೊಳಗೆ ಷಡುಸ್ಥಲ ಬಂದು
ಎನ್ನ ಮನವನಿಂಬುಗೊಳದಿದ್ದಡೆ,
ಸುಡುವೆನೀ ತನುವ ಲಿಂಗದೇವಾ. –ಬವದೀ. 892

ಹಿಂದೊಂದು ವಚನ(ಬವದೀ 888)ದಲ್ಲಿ ಭಕ್ತನೆನಿಸುವೆನಯ್ಯಾ ಮೆಲ್ಲಮೆಲ್ಲನೆ ಎಂದು ಹೇಳಿದರು. ಈಗ ಮೆಲ್ಲಮೆಲ್ಲನೆ ಆದಹೆನೆಂಬನ್ನಬರ ನಾನೇನು ವಜ್ರದೇಹಿಯೆ ಎಂದೆಲ್ಲ ಕೇಳುತ್ತಾರೆ. ಈ ಎರಡೂ ವಚನಗಳ ಭಾವದಲ್ಲಿರುವ ವ್ಯತ್ಯಾಸವೇನು ಸ್ವಲ್ಪ ಚಿಂತನೆ ಮಾಡೋಣ. ಭಕ್ತನೆನಿಸುವೆನಯ್ಯಾ ಮೆಲ್ಲಮೆಲ್ಲನೆ, ಯುಕ್ತ(ಮಾಹೇಶ್ವರ)ನೆನಿಸುವೆನಯ್ಯಾ ಮೆಲ್ಲಮೆಲ್ಲನೆ ಎಂಬುದರ ಅಂತರಾರ್ಥ ಹೀಗಿದೆ. ದೀಕ್ಷೆ ಪಡೆದ ಎಲ್ಲರೂ ಒಂದೇ ವೇಗದಲ್ಲಿ ಮುಂದುವರಿಯಲು ಸಾಧ್ಯವಿಲ್ಲ. ಹೀಗಾಗಿ ಅವರ ಮಟ್ಟಕ್ಕೆ ಅನುಸಾರವಾಗಿ ಸಾಧನಾಮಾರ್ಗದಲ್ಲಿ ಮುಂದುವರಿಯಲು ಅವಕಾಶ ಕೊಡಬೇಕೇ ವಿನಾ ಒತ್ತಡ ಹೇರಬಾರದು. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ ಸ್ಥಲಗಳನ್ನು ನಿಧಾನಗತಿಯಲ್ಲಿ ಏರುವರು. ನಂತರ ವೇಗವು ದ್ವಿಗುಣಿತಗೊಳ್ಳುವುದು. ಬರುವ ಎಡರು ತೊಡರು, ಎದುರಾಗುವ ತಗ್ಗುತೆವರುಗಳ ದಾಟಿ ಬರಬರ ಲಿಂಗೈಕ್ಯನೆನಿಸುತ್ತಾನೆ. ಆದರೆ ಎಲ್ಲರಿಂದಲೂ ಒಂದೇ ಗತಿಯ ಪ್ರಗತಿಯನ್ನು ನಿರೀಕ್ಷಿಸಬಾರದು.

ಇನ್ನು ಈಗಿನ ವಚನ ಗುರು ಬಸವಣ್ಣನವರ ವೈಯಕ್ತಿಕ ಸಾಧನೆ ಕುರಿತಾಗಿ ಇದೆ. "ಆಯುಷ್ಯ ಎಷ್ಟಿರುವುದೋ ಗೊತ್ತಿರದು. ಸಾಧನೆಯಲ್ಲಿ ನಿಧಾನಗತಿ ಸೂಕ್ತವಲ್ಲ. ಸಾಧನೆಯು ನಿಧಾನವಾಗಿ ಸಾಗಲಿ ಎಂದು ವಿಳಂಬ ಮಾಡಲು ನಾನೇನು ವಜ್ರದೇಹಿಯೇ ? ಅಮೃತವನ್ನು ಸೇವಿಸಿರುವೆನೆ ? ಸಂಜೀವಿನಿ ಕಡ್ಡಿಯನ್ನು ತಿಂದಿರುವೆನೆ? ಯಾವ ಸ್ಥಲದಲ್ಲಿ ನಿಂತರೂ ಅದರಲ್ಲಿ ಇನ್ನುಳಿದ ಸ್ಥಲಗಳ ಲಕ್ಷಣಗಳನ್ನು ಅಳವಡಿಸಿಕೊಳ್ಳಬೇಕು. ಆರೂ ಸ್ಥಲಗಳ ಲಕ್ಷಣಗಳು ಪ್ರತಿಸ್ಥಲದಲ್ಲಿ ನಿಂತಾಗಲೂ ಅಳವಡಬೇಕು. ಇಲ್ಲದಿದ್ದರೆ ಈ ನನ್ನ ಶರೀರವನ್ನು (ಜ್ಞಾನಾಗ್ನಿಯಲ್ಲಿ)ಸುಡುತ್ತೇನೆ."

891. ಪೂರ್ವಾಚಾರ ನಿರಸನ

ಕುಲಗೆಟ್ಟಡೆ ಕೆಡಬಹುದಲ್ಲದೆ ಛಲಗೆಡಬಾರದು;
ಛಲಗೆಟ್ಟಡೆ ಕೆಡಬಹುದಲ್ಲದೆ ಭಕ್ತಿಯ ಅನು ಕೆಡಬಾರದು;
ಭಕ್ತಿಯ ಅನು ಕೆಟ್ಟಡೆ ಕೆಡಬಹುದಲ್ಲದೆ ಆಯತ ಕೆಡಬಾರದು;
ಆಯತ ಕೆಟ್ಟಡೆ ಕೆಡಬಹುದಲ್ಲದೆ ಸ್ವಾಯತ ಕೆಡಬಾರದು;
ಲಿಂಗದೇವಯ್ಯಾ, ಮುನ್ನ ಮುಟ್ಟಿತ್ತೆ ಮುಟ್ಟಿತ್ತು ;
ಇನ್ನು ಮುಟ್ಟಿದೆನಾದಡೆ ಎನ್ನ ರಾಣಿವಾಸದಾಣೆ. –ಬವದೀ. 893

ಕುಲಾಚಾರದಲ್ಲಿ ಚ್ಯುತಿ ಬಂದಾಗ ಆತನನ್ನು ಕುಲಗೆಟ್ಟವ ಎನ್ನಲಾಗುವುದು. ಉದಾಹರಣೆಗೆ ವೈದಿಕರು ಉಪನಯನ ಮಾಡಿಸಿಕೊಂಡು ಯಜ್ಞೋಪವೀತವನ್ನು ಧರಿಸಬೇಕು. ಇದನ್ನು ಮಾಡದಿದ್ದಾಗ ಕುಲಗೆಡುವರು. ಗುರು ಬಸವಣ್ಣನವರು ಹೇಳುತ್ತಾರೆ. 'ಕುಲಗೆಟ್ಟಡೆ ಕೆಡಬಹುದಲ್ಲದೆ ಛಲಗೆಡಬಾರದು." ಎಂದು. ಅವರು ಕುಲಗೆಟ್ಟರೇ ವಿನಾ ಛಲಗೆಡಲಿಲ್ಲ. ಛಲದಲ್ಲಿ ಗುರಿಸಾಧನೆ ಇರುತ್ತದೆ. ಒಂದು ಧ್ಯೇಯವನ್ನು ಕಣ್ಣೆದುರಿಗೆ ಇರಿಸಿಕೊಂಡು ಅದನ್ನು ಸಾಕಾರಗೊಳಿಸಲು ಮಾಡುವ ಪರಿಶ್ರಮ ಇರುತ್ತದೆ. ಭಕ್ತಿಯ ತೀವ್ರತೆ ಕಡಿಮೆಯಾಗಬಾರದು ; ಇಷ್ಟಲಿಂಗ ಧಾರಣೆ ಬಿಡಬಾರದು, ಲಿಂಗದೇವನ (ಸ್ವಾಯತ) ನೆನಹನ್ನು ಬಿಡಬಾರದು. ಇದನ್ನು ಹೇಳಿದ ಗುರು ಬಸವಣ್ಣನವರು ನುಡಿಯುತ್ತಾರೆ, "ನಾನು ಈ ಭಕ್ತಿಮಾರ್ಗಕ್ಕೆ ಬರುವ ಮೊದಲು ಕುಲಾಚಾರದ ಪ್ರಕಾರ ಏನೇನೋ ಆಚರಣೆ ಮಾಡಿರಬಹುದು. ಆದರೆ ಇನ್ನು ಅವನ್ನು ನನ್ನ ಹೆಂಡತಿಯ ಆಣೆಯಾಗಿಯೂ ಮಾಡುವುದಿಲ್ಲ." ಎಂದು ಪ್ರತಿಜ್ಞೆ ಮಾಡುತ್ತಾರೆ.

892. ಮನ ಮುಟ್ಟದ ಭಕ್ತಿ

ಅಷ್ಟವಿಧಾರ್ಚನೆ ಷೋಡಶೋಪಚಾರವಲ್ಲದೆ
ನಿಮ್ಮ ಮುಟ್ಟಲರಿಯದವರ ಕಂಡಡೆ, ಅಯ್ಯನೆಂತೆಂಬೆನವರ?
ಆವ ಭಾವದಲ್ಲಿ, ಆವ ಜ್ಞಾನದಲ್ಲಿ, ಆವ ಮುಖದಲ್ಲಿ
ಅರಿವವರದಾರಯ್ಯಾ? ಏನೆಂಬೆ?
ನಿಮ್ಮಲ್ಲಿ ಸಮ್ಯಕ್ಕರಾದ ಸತ್ಯ ಶರಣರ ಕಂಡು,
ಲಿಂಗದೇವಾ, ಅವರನಯ್ಯ ಎಂಬೆನು. –ಬವದೀ. 894

ಮಜ್ಜನಕ್ಕೆರೆದು, ಭಸ್ಮವನ್ನಿಟ್ಟು, ಹೂವು, ಪತ್ರೆ, ಮುಡಿಸಿ ಧೂಪ–ದೀಪ–ನೈವೇದ್ಯವ ಮಾಡಿ ಅಷ್ಟವಿಧಾರ್ಚನೆ ಮಾಡುವುದು ಬಲು ಸುಲಭ. ಅದೇ ರೀತಿ ಜಂಗಮಕ್ಕೆ ಷೋಡಷೋಪಚಾರ ಮಾಡುವುದೂ ಸುಲಭ. ಇವೆಲ್ಲವೂ ಹೊರಗಿನವು. ಈ ಕ್ರಿಯೆಗಳ ಹಿಂದೆ ಮನ ಮುಟ್ಟಬೇಕು. ಹಾಗೆ ಮಾಡದಿದ್ದವರನ್ನು, ಯಾಂತ್ರಿಕವಾಗಿ ಪೂಜೆ ಮಾಡುವವರನ್ನು ಜಂಗಮ ಮೂರ್ತಿಗಳು, ಅಯ್ಯನವರು ಎಂದು ಹೇಗೆ ಗೌರವಿಸಬೇಕು ? ಭಾವದಿಂದ ಜ್ಞಾನದಿಂದ, ಸರ್ವತೋಮುಖದಿಂದ ದೇವರನ್ನು ಅರಿಯಬೇಕು ಮತ್ತು ಅನುಭವಿಸಬೇಕು. ಆದ್ದರಿಂದ ಲಿಂಗದೇವಾ, ನಿಮ್ಮ ಬಗ್ಗೆ ಸಮ್ಯಕ್ ಜ್ಞಾನವನ್ನು ಹೊಂದಿದ ಸತ್ಯ ಶರಣರನ್ನು ಕಂಡು ಅವರನ್ನು ಅಯ್ಯಾ ಎಂದು ಗೌರವಿಸುತ್ತೇನೆ.

ಹೊಸ ಧರ್ಮವನ್ನು ಕೊಟ್ಟ ಬಸವಣ್ಣನವರಿಗೆ ಧರ್ಮ ಪ್ರಸಾರದಲ್ಲಿ ನೆರವಾದುದು ಜಂಗಮರ–ತ್ಯಾಗಿಗಳ ಪಡೆ. ಅವರು ಊರಿಂದೂರಿಗೆ ಸಂಚರಿಸಿ ಜನರನ್ನು ಲಿಂಗಾಯತ ಧರ್ಮಕ್ಕೆ ಆಕರ್ಷಿಸಿ ಸ್ಥಳೀಯವಾಗಿ ದೀಕ್ಷೆ ಮುಂತಾಗಿ ಮಾಡಲು ಕ್ರಿಯಾ ಮೂರ್ತಿಗಳನ್ನು ಆಯ್ಕೆ ಮಾಡುತ್ತಿದ್ದರು. ದೀಕ್ಷಿತರಾದ ಲಿಂಗಾಯತರ ಮಧ್ಯದಲ್ಲೇ ಕ್ರಿಯಾಮೂರ್ತಿಗಳನ್ನು ಆಯ್ಕೆ ಮಾಡಲಾಗುತ್ತಿತ್ತಾದರೂ ಕೆಲವೇ ಸಮಯದಲ್ಲಿ ಅವರಲ್ಲಿ ಅಹಂಭಾವ, ಮೇಲರಿಮೆ ಹುಟ್ಟಿ ಅವರು ಅಯ್ಯನವರೆಂದು ಇತರರಿಗಿಂತಲೂ ಶ್ರೇಷ್ಠರೆಂದು ಬೀಗುತ್ತಿದ್ದರು. ಅಂಥವರನ್ನು ಈ ವಚನದಲ್ಲಿ ಖಂಡಿಸಿ "ನಿಮಗಿಂತಲೂ ಇತರೆ ಶರಣರು ಸಮ್ಯಕ್ ಜ್ಞಾನಿಗಳಾಗಿದ್ದಾರೆ. ಅವರನ್ನು ಗೌರವಿಸುತ್ತೇನೆ." ಎಂದು ಗುರು ಬಸವಣ್ಣನವರು ಹೇಳಿದ್ದಾರೆ.

893. ಪೂಜೆಯು ಮಾಯೆಯಾಗಬಾರದು

ಮರನ ಹೂವ ಕೊಯಿದು ಮರಕ್ಕೇರಿಸಿ,
ನದಿಯುದಕವ ನದಿಗರ್ಪಿತವ ಮಾಡಿ,
ಕರುವನಗಲಿಸಿ, ತಾಯ ಮರುಗಿಸಿ
ಮೊಲೆವಾಲ ಕರೆದುಣಬೇಡವೋ ! ಲಿಂಗದೇವ ಮಾಡಿದ ಮಾಯೆ,
ಹಲಬರ ಬಾಯ ಟೊಣೆದೇ ಹೋಯಿತ್ತು! –ಬವದೀ. 895

ಮೂಢ ಭಕ್ತಿಯಿಂದ ಪೂಜೆ ಮಾಡುವ ಜನ ಗಿಡಮರ, ನೀರು–ಬೆಂಕಿ ಎಲ್ಲವನ್ನೂ ಪೂಜಿಸುವರು. ಬಿಲ್ವ ಪತ್ರೆಯನ್ನು ಕಿತ್ತು ಆ ಪತ್ರೆಗಿಡಕ್ಕೆ ಏರಿಸಿ ಪೂಜೆ ಮಾಡುವರು. ನದಿಯ ನೀರನ್ನು ಲೋಟದಲ್ಲಿ ತುಂಬಿಕೊಂಡು ಆ ನೀರನ್ನು ನದಿಗೆ ಸಿಂಪಡಿಸಿ ಗಂಗಾಪೂಜೆ ಮಾಡುವರು. ಎಲ್ಲ ಹಾಲನ್ನು ತಾವೇ

ಬಳಸಿಕೊಳ್ಳಬೇಕು ಎಂಬ ಸ್ವಾರ್ಥ ಬುದ್ಧಿಯಿಂದ ಹಸು ತೊರೆ ಬಿಡುವಷ್ಟು ಮಾತ್ರ ಕರುವಿಗೆ ಕುಡಿಸಿ, ಅದು ಮರಮರಮರುಗುವಂತೆ ಎಳೆದುಕಟ್ಟಿ ಹಾಲನ್ನು ಕ್ರೂರ ಮನಸ್ಸಿನಿಂದ ಹಿಂಡಿಕೊಳ್ಳುವರು. ಹೀಗೆ ಮಾಡಿದಾಗ ಹಸು–ಕರು ಎರಡೂ ಚಟಪಟಿಸುತ್ತವೆ. ಹಸುವು ತನ್ನ ಕರುವಿಗೆ ಕುಡಿಸಲಾರದ ನಿಸ್ಸಹಾಯಕತೆಯಿಂದ ಮರುಗುತ್ತದೆ. ಕರುವು ಕುಡಿಯಲಾರದ ನಿಸ್ಸಹಾಯಕತೆಯಿಂದ ಮರುಗುತ್ತದೆ. ಇವೆಲ್ಲ ಮನಸ್ಸಿಗೆ ಕವಿದ ಮಾಯೆ. ಇಂಥ ಮಾಯೆ ಹಲವರ ಬಾಯನ್ನು ಮುಚ್ಚಿಸಿಬಿಡುತ್ತದೆ. ಜ್ಞಾನ ಮತ್ತು ಆಂತರಿಕ ಭಕ್ತಿ ಇಲ್ಲದ ಆಚರಣೆಗಳು ಒಂದು ಬಗೆಯ ಮಾಯೆಯಾಗಿ ಅಜ್ಞಾನದ ಮೋಡವನ್ನು ಕವಿಸುತ್ತವೆ.

894. ಶರಣನ ಹಿರಿಮೆ

ತಾಪತ್ರಯವೆಂದಡೆ ರೂಪ ಕಾಣುತ್ತ ಕನಲಿದ,
ಕೋಪದಲ್ಲಿ ಶಿವಕಳೆಯದ ಕರಡಗೆಯನೆ ಮುರಿದ,
ಧೂಪದ ಗುಂಡಿಗೆಯನೊಡೆದ, ದೀಪಾರತಿಯ ನಂದಿಸಿದ,
ಬಹು ಪರಿಯಾಣದೋಗರವ ತುಡುಕಿದ,
ಪಾಪಕರ್ಮಸಂಹರನು ಲಿಂಗದೇವಾ, ನಿಮ್ಮ ಶರಣ. –ಬವದೀ. 896

ಶರಣನು ರೂಪಗಳನ್ನು ನಂಬುವವನಲ್ಲ. ವಿವಿಧ ಆಕಾರಗಳನ್ನು ಕೊಟ್ಟು "ಇದು ದೇವರು" ಎನ್ನುವ ಪ್ರಕ್ರಿಯೆಯನ್ನು ಕಂಡು ಕನಲುತ್ತಾನೆ. ಕೋಪಗೊಂಡು ಬಹಿರಂಗದ ಮೂಢನಂಬಿಕೆಗಳನ್ನು ಖಂಡಿಸುತ್ತಾನೆ. ಜಾತೀಯತೆಯ ದುರ್ಭಾವದ ಧೂಪದ ಗುಂಡಿಗೆಯನ್ನು ಒಡೆಯುತ್ತಾನೆ. ಅಜ್ಞಾನದ ಕತ್ತಲೆಯನ್ನು ನಂದಿಸುತ್ತಾನೆ. ಬಹುಬಗೆಯ ಯಾಂತ್ರಿಕ ಆಚರಣೆಗಳನ್ನು ಸೂರೆಯಾಡುತ್ತಾನೆ. ಇವನ ಕೋಪದ ನಡೆ ಲೌಕಿಕ ಜನರಿಗೆ ವಿಲಕ್ಷಣವಾಗಿ ತೋರುತ್ತದೆಯಾದರೂ ಶರಣನು ಪಾಪಕರ್ಮ ಸಂಹರನು, ಮೌಢ್ಯತೆಯನ್ನು ನಿವಾರಿಸಿ ಲಿಂಗದೇವನ ಜ್ಞಾನವನ್ನು ನೆಲೆಗೊಳಿಸುವವನೂ ಆಗಿರುತ್ತಾನೆ.

895. ಶರಣನ ಹೆಗ್ಗಳಿಕೆ

ಈ ಲೋಕದ ಭೀತರು, ಆ ಲೋಕದ ಕಲಿಗಳು,
ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯರೆಲ್ಲರು
ಅಜನಿತಂಗೆ ಸರಿಯೆ?
ಮೂಜಗದಲ್ಲಿ ನಿರುತರು ಲಿಂಗದೇವನ ಶರಣರು
ತ್ರಿವಿಧವನರಿಯರು. –ಬವದೀ. 897

ಲೌಕಿಕ ಜಗತ್ತು ಪಾರಮಾರ್ಥಿಕ ಜಗತ್ತು ಎಂದು ಎರಡು ಬಗೆಯುಂಟು. ಶರಣರು ಲೌಕಿಕ ಜಗತ್ತಿನ ವ್ಯವಹಾರದಲ್ಲಿ ತೊಡಗಲು ಭಯಪಡುತ್ತಾರೆ. ಆದರೆ ಪಾರಮಾರ್ಥಿಕ ಜಗತ್ತಿನಲ್ಲಿ ನಿರ್ಭಯವಾಗಿ ವ್ಯವಹರಿಸುತ್ತಾರೆ. ಉದಾಹರಣೆಗೆ ನಮಗೆ ಲೌಕಿಕ ಶಿಕ್ಷಣ ಸಂಸ್ಥೆಗಳನ್ನು ತೆರೆಯಲು ತುಂಬಾ ಭಯ. ಲಂಚ ಮುಂತಾಗಿ ಕೊಡಲು ಅಂತರಾತ್ಮ ಒಪ್ಪದು. ಕೊಡದೆ ಇದ್ದರೆ ಕೆಲಸವಾಗದು. ಅದೇ ಜ್ಞಾನ ಜಗತ್ತಿನಲ್ಲಿ ನಿರ್ಭಯವಾಗಿ ವಿಷಯ ಮಂಡಿಸುತ್ತೇವೆ. ವಾದ ಮಾಡುತ್ತೇವೆ. ಶರಣನು ಅಜನಿತ, ಹುಟ್ಟನ್ನು ಗೆದ್ದವನು. ಗುರುವಿನ ಕರಕಮಲದಲ್ಲಿ ಎರಡನೆ ಬಾರಿ ಹುಟ್ಟಿದವನು. ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ ಪದವಿಗಾಗಿ ಹಂಬಲಿಸುವವರು ನಮ್ಮ ಶರಣರಿಗೆ ಸಮನಲ್ಲ. ಶರಣರು ಜೀವನದ ಎಲ್ಲ ರಂಗಗಳಲ್ಲೂ ನಿರತರಾಗಿ ವ್ಯವಹಾರ ಮಾಡುವರು. ಅವರು ತ್ರಿವಿಧ ಸಂಪತ್ತಿನ ಬಗ್ಗೆ ಮೋಹ ಇಲ್ಲದವರಾಗಿ, ತನುಮನಧನ – ಈ ತ್ರಿವಿಧವನ್ನು ಗುರುಲಿಂಗ ಜಂಗಮಕ್ಕೆ ಅರ್ಪಿಸಿರುವರಾಗಿ ಅವರು ಲೋಕದಲ್ಲಿದ್ದೂ ನಿರ್ಲಿಪ್ತರು.

896. ಶರಣ ಸುಯಿಧಾನಿ

ತಾಗು ನಿರೋಧದ, ಆಗುಹೋಗನರಿಯದ
ಶರಣನ ಚರಿತ್ರವ ನೋಡಿ ನೋಡಿ ಬೆರಗಾದೆನಯ್ಯಾ,
ಲಿಂಗದೇವಯ್ಯನಲ್ಲಿ ತಾನು ಸುಯಿಧಾನಿಯಾಗಿ. –ಬವದೀ. 898

ತಾಗು ಅಂದರೆ ಸಂಪರ್ಕ, ನಿರೋಧ ಅಂದರೆ ದೂರವಾಗುವಿಕೆ. ಇವುಗಳ ಆಗು ಹೋಗನು ಶರಣನು ಅರಿಯ. ರಾಗ ಅಂದರೆ ಅತಿಯಾಗಿ ಪ್ರೀತಿಸುವುದು, ದ್ವೇಷ ಅಂದರೆ ತಿರಸ್ಕರಿಸುವಿಕೆ ; ಇವೆರಡರಿಂದಲೂ

ಶರಣನು ದೂರ. ಶರಣನ ನಿರ್ಲಿಪ್ತ ಮನಸ್ಥಿತಿಯ ಚರಿತ್ರವ ನೋಡಿ ನನಗೆ ಆಶ್ಚರ್ಯವಾಗುತ್ತದೆ. ಈ ಸ್ಥಿತಿ ಹೇಗೆ ಬಂದಿದೆ ಎಂದರೆ ಲಿಂಗದೇವನಲ್ಲಿ ಭಾವಲಿಂಗೈಕ್ಯತೆಯ ಸಾಧಿಸಿ ಸಂತೃಪ್ತ ಮನಸ್ಥಿತಿಯನ್ನು ಹೊಂದಿದ ಸುಯಿಧಾನಿಯಾಗಿದ್ದಾನೆ.

897. ಯಾರು ಶ್ರೇಷ್ಠರು ?

ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ,
ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯಾ.
ನೀನು ಜಗಕ್ಕೆ ಬಲ್ಲಿದನು, ಆನು ನಿನಗೆ ಬಲ್ಲಿದನು, ಕಂಡಯ್ಯಾ.
ಕರಿಯು ಕನ್ನಡಿಯೊಳಗಡಗಿದಂತಯ್ಯಾ,
ಎನ್ನೊಳಗೆ ನೀನಡಗಿದೆ ಲಿಂಗದೇವಾ. –ಬವದೀ. 899

ಇಲ್ಲಿ ಮಾಯೆ ಎಂಬ ಪದಕ್ಕೆ ಲೀಲೆ (ಲೀಲಾ ವೈಭವ) ಎಂದು ಅರ್ಥಮಾಡಬೇಕು. ದೇವಾ, ಇಡೀ ಜಗತ್ತನ್ನು ನಿನ್ನ ಲೀಲೆ ಆವರಿಸಿಕೊಂಡಿದೆ. ಇಂಥ ನಿನ್ನನ್ನು ನನ್ನ ಮನ ಬಚ್ಚಿಟ್ಟುಕೊಂಡಿದೆ. ನೀನು ಜಗತ್ತಿನಲ್ಲಿಯೇ ಬಲ್ಲಿದನು, ಸರ್ವಜ್ಞ. ಆದರೆ ನಾನು ನಿನ್ನನ್ನು ಅರಿತುಕೊಂಡವನಾಗಿದ್ದೇನೆ. ಆನೆಯು ಪ್ರತಿಬಿಂಬವಾಗಿ ಕನ್ನಡಿಯಲ್ಲಿ ಅಡಗಿದಂತೆ ನೀನು ನನ್ನೊಳಗೆ ಅಡಗಿದ್ದೀಯ. ಆದ್ದರಿಂದ ಯಾರು ಶ್ರೇಷ್ಠರು? ಸೃಷ್ಟಿಕರ್ತನು, ಲೀಲಾ ಮೂರ್ತಿಯೂ ಆದ ನೀನು ಶ್ರೇಷ್ಠನೋ ? ನಿನ್ನನ್ನು ಅಡಗಿಸಿಕೊಂಡ ನಾನು ಶ್ರೇಷ್ಠನೋ ?

898. ಎನಗೆ ಗುರುವಿನ ಪ್ರಸಾದ

ಎನಗೆ ಗುರುವಿನ ಪ್ರಸಾದ, ನಿನಗೆ ಚೆನ್ನನ ಪ್ರಸಾದ,
ಎನಗೆಯೂ ನಿನಗೆಯೂ ಸಮಯಾಚಾರ ಸರಿ.
ಲಿಂಗದೇವಾ, ನೀನೆನಗೆ ಚಿಕ್ಕ ತಮ್ಮ. –ಬವದೀ. 900

ನಾನು ಗುರುವಿನಿಂದ ಪ್ರಸಾದ ಪಡೆದೆ. ಶಿವನೇ ನೀನು ಮಾದಾರ ಚನ್ನಯ್ಯನ ಮನೆಯ ಅಂಬಲಿಯ ಪ್ರಸಾದ ಉಂಡೆ. ಹೀಗಾಗಿ ಇಬ್ಬರದೂ ಒಂದೇ ಸಮಯಾ(ಪಂಥಾ)ಚಾರ. ಹೀಗಾಗಿ ಕೂಡಲಸಂಗಮದೇವಾ ನೀನು ನನಗೆ ಚಿಕ್ಕ ತಮ್ಮ.

ಇದು ಗುರು ಬಸವಣ್ಣನವರು ಸಾಕ್ಷಾತ್ಕಾರಕ್ಕೆ ಪೂರ್ವದಲ್ಲಿ ಬರೆದ ವಚನ. ಶೈವ ಪಂಥದಲ್ಲಿ ಶಿವನ ಪ್ರಸಾದಕ್ಕೆ ಮಹತ್ವದ ಸ್ಥಾನವಿದೆ.

899. ಲಿಂಗದೇವನಾರೋಗಣೆ

ಶುದ್ಧಾತ್ಮ ಪರಮಾತ್ಮರಿಬ್ಬರೂ
ಒಂದು ರತ್ನಕ್ಕೆ ಹೆಣಗಾಟವಾಡಿಹರು.
ಅವರ ಹೆಣಗಾಟವ ನೋಡಿ ಆ ರತ್ನವ ಸೆಳೆದುಕೊಂಡಡೆ
ಲಿಂಗದೇವಂಗಾರೋಗಣೆಯಾಯಿತ್ತು.
–ಬವದೀ. 901

ಶುದ್ಧಾತ್ಮ – ಅಂದರೆ ಅಂತಃಕರಣ ಶುದ್ಧಿ ಸಾಧಿಸಿದ ಜೀವಾತ್ಮ ಮತ್ತು ಸೃಷ್ಟಿಕರ್ತನಾದ ಪರಮಾತ್ಮ ಇಬ್ಬರೂ ಒಂದು ರತ್ನಕ್ಕಾಗಿ ಹೆಣಗಾಟವನ್ನಾಡುತ್ತಿದ್ದಾರೆ. ಯಾವುದು ಆ ರತ್ನ ? ದಿವ್ಯಾನುಭವ (Mystic Experience). ಹೃದಯ ಮಂದಿರದಲ್ಲಿ ಸ್ಫುರಿಸುವ ಆ ದಿವ್ಯಾನುಭವವನ್ನು ಶುದ್ಧಾತ್ಮ ಪರಮಾತ್ಮರಿಬ್ಬರ ಸಂಯೋಗದಿಂದಲೇ ಸಾಧಕನು ಪಡೆಯುವುದು. ಆ ದಿವ್ಯಾನುಭವವನ್ನು ಸೆಳೆದುಕೊಂಡರೆ ಅದು ಲಿಂಗದೇವಂಗೆ ಆರೋಗಣೆಯಾಗುವುದು.

900. ಪದಾರ್ಥವ ಮಾಡಿಕೊಡು

ಆ ರತ್ನ ಪ್ರಸಾದವನಾರಾಧಿಸುತ್ತಿರಲು
ಆ ಪ್ರಸಾದವಲ್ಲಿ ಬೀಳುತ ಆಳುತ್ತಿದ್ದಿತ್ತು, ನೋಡಾ.
ಅದ ಹಲಬರು ನೋಡಿ ನೋಡಿ ಹೋಗುತ್ತಿದ್ದರು.

ಆ ಪ್ರಸಾದ ತಾನೇ ಬಂದು ಎನ್ನ ಸುತ್ತಿಕೊಂಡಿತ್ತು.
ಇದ ಪದಾರ್ಥವ ಮಾಡಿಕೊಂಡಯ್ಯಾ ಲಿಂಗದೇವಾ. –ಬವದೀ. 902

ಹಿಂದಿನ ವಚನದ ಮುಂದುವರಿದ ಭಾಗದಂತೆ ಈ ವಚನವಿದೆ. ಆ ದಿವ್ಯಾನುಭೂತಿ ಎಂಬ ರತ್ನವನ್ನು ಅನುಭವಿಸುತ್ತಿರಲು ಅದರ ಪರಿಣಾಮವಾಗಿ ಆನಂದ ಎನ್ನುವ ಪ್ರಸಾದ ಧಾರೈಸುತ್ತಲಿದೆ ಮತ್ತು ಇಡೀ ವ್ಯಕ್ತಿತ್ವವನ್ನು ಆವರಿಸುತ್ತಲಿದೆ. ಚಿತ್ತಮನಬುದ್ಧಿ ಅಹಂಕಾರ ಭಾವ ಎಂಬ ಪಂಚಕರಣಗಳು ಈ ಆನಂದವನ್ನು ಅನುಭವಿಸುತ್ತಲಿವೆ. ಈ ಆನಂದವು ತಾನೇ ಬಂದು ಗುರು ಬಸವಣ್ಣನವರನ್ನು (ಸಾಧಕರನ್ನು) ಸುತ್ತಿಕೊಳ್ಳುತ್ತಲಿದೆ. ಬಹಿರಂಗದ ಪ್ರಜ್ಞೆಯಳಿದಿದೆ. "ಬಹಿರಂಗದ ಪ್ರಜ್ಞೆಯನ್ನು ಬರಿಸಯ್ಯಾ ಲಿಂಗದೇವ" ಎಂದು ಗುರುಬಸವಣ್ಣನವರು ದೇವರಲ್ಲಿ ಬೇಡಿಕೊಳ್ಳುತ್ತಾರೆ.

901. ದಿವ್ಯಾನುಭವದ ಬೇಟೆ

ಎಲ್ಲರ ಗಂಡರು ಬೇಂಟೆಗೆ ಹೋದರು,
ನೀನೇಕೆ ಹೋಗೆ, ಎಲೆ ಗಂಡನೆ?
ಸತ್ತುದ ತಾರದಿರು, ಕೈಮುಟ್ಟಿ ಕೊಲ್ಲದಿರು.
ಅಡಗಿಲ್ಲದೆ ಮನೆಗೆ ಬಾರದಿರು.
ದೇವರ ಧರ್ಮದಲೊಂದು ಬೇಂಟೆ ದೊರಕೊಂಡಡೆ
ಲಿಂಗದೇವಂಗರ್ಪಿತವ ಮಾಡುವೆ, ಎಲೆ ಗಂಡನೆ. –ಬವದೀ. 903

ಇನ್ನಿತರ ಸಾಧಕರು ಸಾಧನೆ(ಬೇಂಟೆ)ಯಲ್ಲಿ ಮುಂದುವರಿಯುತ್ತಿದ್ದಾರೆ ಎಲೈ ಮನಸ್ಸೇ ನೀನೇಕೆ ಮುಂದುವರಿಯುತ್ತಿಲ್ಲ ? ಸತ್ತುದ ತಾರದಿರು = ನಿರ್ವಿಕಲ್ಪ ಸಮಾಧಿಗೆ ಹೋಗಬೇಡ ; ಕೈಮುಟ್ಟಿ ಕೊಲ್ಲದಿರು = ಇಂದ್ರಿಯಗಳನ್ನು ನಿರ್ವೀರ್ಯ ಮಾಡಬೇಡ ಆದರೆ ದಿವ್ಯಾನುಭವವಿಲ್ಲದೆ ಧ್ಯಾನದಿಂದ ಬಹಿರ್ಮುಖಿವಾಗಬೇಡ. ದೇವರನ್ನು ಆರಾಧಿಸುವ ಈ ಸಾಧನೆಯಲ್ಲಿ ದಿವ್ಯಾನುಭವ ಪ್ರಾಪ್ತಿಯಾದರೆ ಅದನ್ನೂ ಲಿಂಗದೇವನಿಗೆ ನಾನು ಅರ್ಪಿಸುತ್ತೇನೆ. ಕೇಳು ನನ್ನ ಮನಸ್ಸೇ !

902. ಅಣಕದ ಭೇದ

ಕಣ್ಣೊಳಗೆ ಕಣ್ಣಿದ್ದು ಕಾಣಲೇಕರಿಯರಯ್ಯಾ?
ಕಿವಿಯೊಳಗೆ ಕಿವಿಯಿದ್ದು ಕೇಳಲೇಕರಿಯರಯ್ಯಾ?
ಘ್ರಾಣದೊಳಗೆ ಘ್ರಾಣವಿದ್ದು ವಾಸಿಸಲೇಕರಿಯರಯ್ಯಾ?
ಜಿಹ್ವೆಯೊಳಗೆ ಜಿಹ್ವೆಯಿದ್ದು ರುಚಿಸಲೇಕರಿಯರಯ್ಯಾ?
ಸ್ಪರ್ಶನದೊಳಗೆ ಸ್ಪರ್ಶನವಿದ್ದು ಮುಟ್ಟಲೇಕರಿಯರಯ್ಯಾ?
ಪ್ರಾಣದೊಳಗೆ ಪ್ರಾಣವಿದ್ದು ನೆನೆಯಲೇಕರಿಯರಯ್ಯಾ?
ಕಾಯದೊಳಗೆ ಕಾಯವಿದ್ದು ಬಿಡದು, ಬೇರಾಗದು.
ಲಿಂಗದೇವಾ, ನೀನಿಕ್ಕಿದ ಅಣಕದ ಭೇದವ ಭೇದಿಸಬಾರದು. –ಬವದೀ. 904

ಜಗತ್ತಿನ ದೃಶ್ಯಾವಳಿಗಳನ್ನು ನೋಡುವ ಭೌತಿಕ ಕಣ್ಣುಗಳಿವೆ. ಈ ಕಣ್ಣಿಗೆ ಕಣ್ಣಾಗಿ ಒಂದು ಶಕ್ತಿ ಇದೆ. ಆ ಶಕ್ತಿ (ಆತ್ಮ) ಇಲ್ಲದಿದ್ದರೆ ಈ ಕಣ್ಣುಗಳು ಏನನ್ನೂ ನೋಡಲಾರವು. ಕಿವಿಯು ಶಬ್ದವನ್ನು ಗ್ರಹಿಸುತ್ತದೆ. ಈ ಕಿವಿಗೆ ಕಿವಿಯಾಗಿ ಒಂದು ಶಕ್ತಿ ಇದೆ. ಆ ಶಕ್ತಿ ಇಲ್ಲದಿದ್ದರೆ ಈ ಕಿವಿಗಳು ಹೊರಗಿನ ಶಬ್ದವನ್ನು ಗ್ರಹಿಸಲಾರವು. ಘ್ರಾಣ ಅರ್ಥಾತ್ ಮೂಗು ಇದೆ. ವಾಸನೆಯನ್ನು ಗ್ರಹಿಸುವ ಮೂಗು, ರುಚಿಯನ್ನು ಗ್ರಹಿಸುವ ನಾಲಿಗೆ, ಶೀತೋಷ್ಣಗಳನ್ನು ಗ್ರಹಿಸುವ ಚರ್ಮ ಇವಕ್ಕೆಲ್ಲ ಪ್ರೇರಕ ಶಕ್ತಿಯೇ ಆತ್ಮ. ಇದು ಶರೀರದೊಳಗೆ ಅತ್ಯಂತ ಸೂಕ್ಷ್ಮವಾದ ಚೈತನ್ಯವಾಗಿ ಶರೀರದ ತುಂಬೆಲ್ಲ ನೆಲೆಸಿರುವುದು. ಸಾವಿನ ಹೊರತು ಇಡೀ ಜೀವನ ಪರ್ಯಂತರ ಬೇರಾಗದಂತೆ ಬೆರೆಸಿಹುದು. ಲಿಂಗದೇವಾ, ಗೋಚರವಾಗದ ಸ್ಥಿತಿಯಲ್ಲಿದ್ದು ಪಂಚೇಂದ್ರಿಯಗಳನ್ನು ಕಾರ್ಯೋನ್ಮುಖವಾಗಿ ಮಾಡುವ ನಿನ್ನ ಅಣಕದ ಭೇದವ ಹುಲು ಮಾನವರು ಭೇದಿಸಲಾರರು." ಎಂದು ಗುರು ಬಸವಣ್ಣನವರು ಆಶ್ಚರ್ಯ ಪಡುತ್ತಾರೆ.

903. ಬೆವಹಾರದಿಂದ ವಿಮುಖ

ಗ್ರಹ ಬಂದು ಆವರಿಸಲೊಡನೆ ತನ್ನ ಮರೆಸುವದು,
ಮತ್ತೊಂದಕ್ಕೆ ಇಂಬುಗೊಡಲೀಯದಯ್ಯಾ.
ಲಿಂಗದೇವನ ಅರಿವು ಅನುಪಮವಾಗಲೊಡನೆ
ಬೆವಹಾರದೊಳಗಿರಲೀಯದಯ್ಯಾ. –ಬವದೀ. 905

ದೆವ್ವ, ಭೂತ ಬಂದು ಹಿಡಿಯುತ್ತಿದ್ದಂತೆಯೇ ಅದು ತನ್ನ ಪ್ರಭಾವವನ್ನು ಬೀರಿ ವ್ಯಕ್ತಿಯ ಸ್ವಂತಿಕೆಯನ್ನು ನಾಶ ಮಾಡುವುದು ; ಬೇರೆ ಭಾವನೆಗಳಿಗೆ ಅವಕಾಶ ಮಾಡಿಕೊಡುವುದಿಲ್ಲ. ಹಾಗೆ ಲಿಂಗದೇವನ ಅರಿವು, ಸಾಮರಸ್ಯದ ಆನಂದ ಪ್ರಾಪ್ತಿಯಾಗುತ್ತಿದ್ದಂತೆಯೇ ಅದರಲ್ಲೇ ಇರಬೇಕು ಎನ್ನಿಸುತ್ತದೆ. ಮತ್ತೆ ವ್ಯಾವಹಾರಿಕ ಪ್ರಪಂಚಕ್ಕೆ ಬರಬೇಕು ಎನ್ನಿಸುವುದೇ ಇಲ್ಲ.

904. ಲಿಂಗದೇವನ ಕೂಟ

ಭೂತಿಕನ ಸೀರೆಯ ಸಾತ್ವಿಕ ನೆರೆ ಉಟ್ಟಡೆ
ಭೂತಿಕ ಸಾತ್ವಿಕನಾದ, ಸಾತ್ವಿಕ ಭೂತಿಕನಾದ:
ಈ ಮಾತು ಬಿದ್ದುದು ನೋಡಾ, ರಾಜಬೀದಿಯಲ್ಲಿ.
ಅಯ್ಯಾ, ಭೂತ ಕೆಣಕಿದಡಿಲ್ಲ, ಮಾತು ಮುಟ್ಟಿದಡಿಲ್ಲ
ಓತು ಕೂಡುವ ಅನುವ, ಲಿಂಗದೇವ ತಾನೆ ಬಲ್ಲ. –ಬವದೀ. 906

"ಭೂತ ಹಿಡಿದವನ ಬಟ್ಟೆಗಳನ್ನು ಸಾತ್ವಿಕನು ಉಟ್ಟರೆ ಸಾತ್ವಿಕ ಸ್ವಭಾವದವನು ಭೂತ ಹಿಡಿದವನಾದ; ಭೂತ ಹಿಡಿದವನು ಸಾತ್ವಿಕನ ಬಟ್ಟೆ ಉಟ್ಟು ಸಾತ್ವಿಕನಾದ." ಎಂದು ಜನರು ನಂಬುತ್ತಾರೆ. ಈ ಮಾತು ಪೂರ್ಣ ಸುಳ್ಳು. ಬಹಿರಂಗವಾಗಿಯೇ ಇದನ್ನು ನಿರಾಕರಿಸುತ್ತೇವೆ. "ಅಯ್ಯಾ ಭೂತ ಕೆಣಕಿದಡಿಲ್ಲ ! ಮಾತು ಮುಟ್ಟಿದಡಿಲ್ಲ." ಈ ವಾಕ್ಯದ ಅರ್ಥ ತಿಳಿಯುತ್ತಲಿಲ್ಲ. ಪರಮಾತ್ಮನನ್ನು ಕೂಡುವ ವಿಧಾನವನ್ನು ಅವನೇ ಬಲ್ಲ ಎಂದು ಕಡೆಯ ವಾಕ್ಯದಲ್ಲಿ ಹೇಳಲಾಗಿದೆ.

905. ಶರಣ ಸತಿಯ ಪರಿಶುದ್ಧತೆ

ಮನೆಯ ಗಂಡನ ಮನೆವಾರ್ತೆಯನೇನ ಹೇಳುವೆನವ್ವಾ!
ಅಂಗವಿದ್ಯೆಯನೊಲ್ಲ,
ಕಂಗಳೊಳಗಣ ಕಸವ ಕಳೆದಲ್ಲದೆ ನೋಡಲೀಯ,
ಕೈಯ ತೊಳೆದಲ್ಲದೆ ಮುಟ್ಟಲೀಯ,
ಕಾಲ ತೊಳೆದಲ್ಲದೆ ಹೊದ್ದಲೀಯ.
ಇಂತೀ ಸರ್ವಾಂಗ ತಲೆದೊಳೆದ ಕಾರಣ,
ಲಿಂಗದೇವನೆನ್ನ ಕೂಡಿಕೊಂಡನವ್ವಾ !
–ಬವದೀ. 907

ಶರಣ ಸತಿ ಲಿಂಗ ಪತಿ ಭಾವದಿಂದ ಬರೆಯಲ್ಪಟ್ಟ ವಚನವಿದು. ಲಿಂಗಪತಿಯ ವಿಚಿತ್ರ ವರ್ತನೆಯನ್ನು ಏನು ಹೇಳಲಿ ? ಅಂಗವಿದ್ಯೆಗಳನ್ನು ಸ್ವಲ್ಪವೂ ಇಷ್ಟಪಡುವುದಿಲ್ಲ. ಅಂಗವಿದ್ಯೆ ಎಂದರೆ ಕಾಮಕ್ರೋಧಲೋಭಮೋಹಮದ ಮತ್ಸರಾದಿಗಳ ಚೇಷ್ಟೆ. ಇವನ್ನು ಲಿಂಗಪತಿ ಒಲ್ಲ. ಕಣ್ಣಿನಲ್ಲಿರುವ ಕಸವಾದ ಕುದೃಷ್ಟಿ, ಸಂಕುಚಿತ ಮನೋಭಾವ ಮುಂತಾದುವನ್ನು ಕಳೆದುಕೊಳ್ಳದಿದ್ದರೆ ಅವನನ್ನು ನೋಡಲು ಬಿಡನು. ದುರಾಚಾರ, ದುಷ್ಕೃತಿಗಳ ಕೊಳೆಯನ್ನು ಕಳೆದುಕೊಂಡಲ್ಲದೆ ಮುಟ್ಟಲಿಕ್ಕೆ ಅವಕಾಶ ಕೊಡನು. ದುರ್ನಡತೆಯ ನಡೆಯನ್ನು ತೊರೆದಲ್ಲದೆ ಸಮೀಪಕ್ಕೆ ಬರಲು ಬಿಡನು. ಆದರೆ ನಾನು ಸರ್ವಾಂಗವನ್ನು ಶುದ್ಧೀಕರಿಸಿಕೊಂಡಿರುವ ಕಾರಣ ಲಿಂಗದೇವನು ನನ್ನನ್ನು ಕೂಡಿಕೊಂಡಿದ್ದಾನೆ. ಲಿಂಗಾಂಗ ಸಾಮರಸ್ಯದ ಆನಂದವನ್ನು ನನಗೆ ನೀಡಿದ್ದಾನೆ.

906. ಲಿಂಗಪತಿಯಷ್ಟೆ ಆಶ್ರಯ

ಅಳಿಯನ ಕಂಡಡೆ ನಾಚೆಂಬೆ ಮಗಳೆ,

ಅಳಿಯನ ಕಂಡಡೆ ತೊಲಗೆಂಬೆ ಮಗಳೆ,
ನಾಚುವಡೆ ಮೊರೆಯಿಲ್ಲ, ತೊಲಗುವಡೆ ನೆಲನಿಲ್ಲ !
ಇಬ್ಬರಿಗೊಬ್ಬ ಗಂಡನಾದ ಬಳಿಕ
ಇನ್ನೆಲ್ಲಿಯ ಮೊರೆ ಮಗಳೆ?
ಲಿಂಗದೇವಯ್ಯನೆಂಬ ಗಂಡನಾದ ಬಳಿಕ
ಇನ್ನೆಲ್ಲಿಯ ಮೊರೆ ಮಗಳೆ ?
–ಬವದೀ. 908

ಸಾಮಾನ್ಯವಾಗಿ ಭಾರತೀಯ ಸಂಸ್ಕೃತಿಯಲ್ಲಿ ಅಳಿಯನ ಎದುರಿಗೆ ಅತ್ತೆ ನಿಲ್ಲುವುದಿಲ್ಲ. ಮರೆಯಲ್ಲಿ ನಿಂತು ಮಾತನಾಡುತ್ತಾರೆ. ಹೊರಗಿನಿಂದ ಅಳಿಯ ಬಂದರೆ ತಕ್ಷಣ ಎದ್ದು ಒಳಗೆ ಹೋಗುತ್ತಾರೆ. ಇದು ಲೋಕಾರೂಢಿ. ಆದರೆ ಎಲೆ ಮನಸ್ಸೆ (ಮಗಳೆ), ಲಿಂಗದೇವನು ಪತಿಯಾದರೆ ನಾಚುವುದು ಹೇಗೆ ? ತೊಲಗುವುದು ಎಲ್ಲಿಗೆ ? ನನಗೆ (ನನ್ನ ಆತ್ಮನಿಗೆ) ಮತ್ತು ಮನಸ್ಸು–ಇವೆರಡಕ್ಕೂ ಲಿಂಗದೇವನೊಬ್ಬನೇ ಗಂಡನಾದ ಬಳಿಕ ಅವನನ್ನು ಬಿಟ್ಟು ಬೇರೆ ಆಶ್ರಯ ಎಲ್ಲಿದೆ ?

907. ಭ್ರಮೆ ನಿವಾರಿಸಲು ಪ್ರಾರ್ಥನೆ

ಸತ್ಯವಿದೆ, ಸಮಾಧಾನವಿದೆ, ಮನಕ್ಕೆ ಬಾರದಿದೇನಯ್ಯಾ?
ಸರ್ವಸನುಮತವೆಂಬ ಸುಖವಿದೆ, ಮನಕ್ಕೆ ಸೋಂಕದಿದೇನಯ್ಯಾ?
ಆನೀನೆಂಬುದೊಂದು ಘನವಿದೆ,
ಮನಕ್ಕೆ ತೋರದಿದೆನಯ್ಯಾ ?
ಭ್ರಮೆಯೋ, ಕೂಡಲಸಂಗಮದೇವಾ ? –ಬವದೀ. 909

ಸಾಧಕಾವಸ್ಥೆಯಲ್ಲಿ ಗುರು ಬಸವಣ್ಣನವರು ಬರೆದ ವಚನವಿದು. ಅವರಿನ್ನೂ ಪರಮಸತ್ಯವಾದ ಪರಮಾತ್ಮನ ಅನ್ವೇಷಣೆಯಲ್ಲಿರುತ್ತಾರೆ. ಪರಮಾತ್ಮನು ಪರಮ ಸತ್ಯ ಎಂದು ಜ್ಞಾನಿಗಳು ಹೇಳುತ್ತಾರೆ. ಅವನ ಅನುಭವ ಪಡೆದಾದ ಮೇಲೆ ಸಮಾಧಾನ ದೊರಕುತ್ತದೆ ಎಂದು ಹೇಳುತ್ತಾರೆ. ಆದರೆ ಇದಾವುದೂ ನನ್ನ ಮನಕ್ಕೆ ಗೋಚರವಾಗುತ್ತಲಿಲ್ಲ. ಅಪಾರವಾದ ಸುಖ ಅಧ್ಯಾತ್ಮಿಕ ಅನುಭವದಲ್ಲಿದೆ ಎಂದು ಹೇಳಲಾಗುತ್ತದೆ. ಆದರೆ ಅದು ನನ್ನ ಮನಸ್ಸಿಗೆ ಸೋಂಕದಾಗಿದೆ. ನಾನು ಅಂದರೆ ಜೀವಾತ್ಮ ನೀನು ಎಂದರೆ ಪರಮಾತ್ಮ ಎಂಬ ಘನವಾದ ಸತ್ಯವಿದೆ ಎಂದು ಹೇಳಲಾಗುವುದು. ಆದರದಿನ್ನೂ ನನ್ನ ಮನಕ್ಕೆ ತೋರುತ್ತಲಿಲ್ಲ. ಇವೆಲ್ಲವೂ ಭ್ರಮೆಯೋ ಸತ್ಯವೋ? ನಾನು ಭ್ರಮೆಯ ದಾರಿಯಲ್ಲಿ ಇರುವೆನೆ ?

908. ಲಿಂಗದೇವನಂತಪ್ಪ ಮಗ

ಸಿನೆ ಬಂಜೆಯರಿಬ್ಬರಿಗೊಬ್ಬ ಮಗ ಹುಟ್ಟಿ,
ಅವನೆನ್ನ ರಿಣಕ್ಕೊಡೆಯನಾದ,
ಅವನೆನ್ನ ಧನಕ್ಕೊಡೆಯನಾದ,
ಆನು ಗಳಿಸಿದ ಒಮ್ಮನಕ್ಕೆ ಅಗಲದೆ ಮೋಹಿತನಾದ.
ಲಿಂಗದೇವನಂತಪ್ಪ ಮಗ ಹುಟ್ಟಿದಡೆ,
ಇದ್ದನಯ್ಯಾ ಕಾಯ ಮಾತೆಯಾಗಿ, ಜೀವ ಪಿತನಾಗಿ
ನಾನಿರಿಸಿದಂತೆ ! –ಬವದೀ. 910

ಶರೀರ ತನ್ನಿಂದ ತಾನೆ ಏನೂ ಮಾಡಲಾರದ ಘಟಕ ; ಜೀವವೂ ಕಾಯದ ನೆರವಿಲ್ಲದೆ ಏನೂ ಮಾಡಲಾರದ ಘಟಕ. ಇವೆರಡರ ಸಂಯೋಗದಿಂದ ಒಂದು ದಿವ್ಯಾನುಭವ ಎಂಬುದು ಪ್ರಾಪ್ತವಾಗುತ್ತದೆ. ಜೀವಾತ್ಮವು ಗಳಿಸಿದ ರಿಣ ಮತ್ತು ಧನದ ಸಂಪತ್ತಿಗೆ ಅದು ಒಡೆಯನಾಗುತ್ತದೆ. ಸಾಧಕನು ಗಳಿಸುವ ಒಮ್ಮನಕ್ಕೆ ಅಂದರೆ ಏಕಾಗ್ರತೆಗೆ ಮೋಹಿತವಾಗುತ್ತದೆ. ಕಾಯವೇ ಮಾತೆಯಾಗಿ ಜೀವವೇ ಪಿತನಾಗಿ ಲಿಂಗದೇವನ ಈ ದಿವ್ಯಾನುಭವ ಆನಂದವನ್ನು ತಂದುಕೊಡುತ್ತದೆ.

909. ತ್ರಿವಿಧ ನಾಸ್ತಿ

ಪೂಜೆಯುಳ್ಳನ್ನಬರ ಲಿಂಗವ ಹಾಡಿದೆ,
ಮಾಟವುಳ್ಳನ್ನಬರ ಜಂಗಮವ ಹಾಡಿದೆ,
ಜಿಹ್ವೆಯುಳ್ಳನ್ನಬರ ಪ್ರಸಾದವ ಹಾಡಿದೆ.
ಈ ತ್ರಿವಿಧ ನಾಸ್ತಿಯಾದ ಬಳಿಕ
ಎನ್ನ ನಾ ಹಾಡಿಕೊಂಡೆ ಕಾಣಾ, ಲಿಂಗದೇವಾ. –ಬವದೀ. 911

ಅಷ್ಟವಿಧಾರ್ಚನೆ ಮಾಡುತ್ತ ಪೂಜೆಯನ್ನು ಮಾಡಿಕೊಳ್ಳುವವರೆಗೆ ಲಿಂಗದೇವನ ಸ್ತೋತ್ರವನ್ನು ಮಾಡಿದೆ. ಇಷ್ಟಲಿಂಗದರ್ಪಣದಲ್ಲಿ ದೃಷ್ಟಿಯೋಗವನ್ನು ಮಾಡುತ್ತ ಮೈಮರೆತೆನು. ಆಗ ಹಾಡುವುದನ್ನೇ ಮರೆತೆ. ದಾಸೋಹದ ಮಾಟ ಇರುವವರೆಗೂ ಜಂಗಮ (ಸಮಾಜ)ದ ಸೇವೆ ಮಾಡಿದೆ. ನಂತರ ಆ ದಾಸೋಹದ ಮಾಟದಲ್ಲಿ ನನ್ನನ್ನು ನಾ ಮರೆತೆ. ಎಲ್ಲಿಯ ತನಕ ನಾಲಿಗೆ ಇದೆಯೋ ಅಲ್ಲಿಯವರೆಗೂ ಪ್ರಸಾದವನ್ನು ಸ್ವೀಕರಿಸುವೆ, ಅದನ್ನು ಕೊಂಡಾಡುವೆ. ಭಾವಲಿಂಗೈಕ್ಯ ಸ್ಥಿತಿಗೆ ಹೋದಾಗ ಇವೆಲ್ಲವೂ ನಾಸ್ತಿಯಾಗುತ್ತವೆ. ಆಗ ಸ್ವರೂಪದರ್ಶನವಾಗಿ ನನ್ನ ನಾ ಹಾಡಿಕೊಂಡೆ.

910. ಶರಣರ ನಿಲುವು

ಅನಾಯಾಸದಿಂದ ಮನೆಯ ಮಾಡಿ,
ನಿರಾಯಾಸದಿಂದ ಪರಮಸುಖಿ!
ರೂಪಿಸುವಲ್ಲಿ ರೂಪಾಧಿಕ, ನೋಡುವಲ್ಲಿ ನೋಟ ಘನ !
ಇಂತಹ ಸಹಜಸಂಗಿಯ ನಿಲವಿನ ಪರಿ:
ಉದಕದೊಳಗಣ ಬಿಂದು ಉದಯರತ್ನದಂತೆ
ಲಿಂಗದೇವನ ಶರಣರ ನಿಲವು. –ಬವದೀ. 912

ಶರಣನು ಆಯಾಸವಿಲ್ಲದೆ ತನ್ನ ಹೃದಯವನ್ನು ದೇವನಿಗೆ ಮನೆಯನ್ನಾಗಿ ಮಾಡುತ್ತಾನೆ. ಸಹಜವಾಗಿಯೇ ದಿವ್ಯಾನುಭವವನ್ನು ಪಡೆದು ಪರಮ ಸುಖಿಯಾಗುತ್ತಾನೆ. ರೂಪವನ್ನು ನೋಡಿದರೆ ತನ್ನ ಶಾಂತ, ಗಂಭೀರ ಮುಖಮುದ್ರೆಯಿಂದ ರೂಪವಂತನಾಗಿ ತೋರುತ್ತಾನೆ. ಅವನ ನೋಟವು ಸಾತ್ವಿಕವೂ ಘನವೂ ಕರುಣಾರಸದಿಂದ ಕೂಡಿರುವಂಥದೂ ಆಗಿರುತ್ತದೆ. ಇವನ ಒಡನಾಟವು ಸರಳವೂ, ಸಹಜವೂ, ನೇರವೂ ಆಗಿರುತ್ತದೆ. ಬೆಳಗಿನ ಹೊತ್ತು ಸೂರ್ಯೋದಯವಾಗುವಾಗ ನೀರಿನ ಹನಿಗಳು ಹುಲ್ಲಿನ ಮೇಲೆ, ತಾವರೆ ಎಲೆಯ ಮೇಲೆ ಬಿದ್ದು ರತ್ನದ ಹರಳಿನಂತೆ ಹೊಳೆಯುತ್ತವೆ. ಅದೇ ರೀತಿ ಲಿಂಗದೇವನ ಶರಣರು ಜ್ಞಾನ ಪ್ರಭೆಯಿಂದ ಹೊಳೆಯುತ್ತಾರೆ.

911. ಎಲ್ಲೆಲ್ಲೂ ದೇವನೆ !

ಮರುಳುತಲೆ ಹುರುಳುತಲೆ ನೀನೆ ದೇವಾ,
ಹೆಂಗೂಸು ಗಂಡುಗೂಸು ನೀನೆ ದೇವಾ,
ಎಮ್ಮಕ್ಕನ ಗಂಡ ನೀನೇ ದೇವಾ. ಲಿಂಗದೇವಾ
ಭ್ರಾಂತಳಿದು ಭಾವನಿಂದುದಾಗಿ. –ಬವದೀ. 913

ಶರಣನಿಗೆ ಒಂದು ಸ್ಥಿತಿಗೆ ಏರಿದಾಗ ಎಲ್ಲೆಲ್ಲಿಯೂ ದೇವನೇ ಕಾಣುತ್ತಾನೆ. ಆಗಲೇ ಅವನು ವಿಶ್ವಕುಟುಂಬಿಯಾಗುವುದು; ದೇವನು ಸೃಷ್ಟಿಸಿದ ಮರ್ತ್ಯಲೋಕದ ಮಹಾಮನೆಯ ಮಗನಾಗುವುದು. ಆಗ ಮರುಳು (ದಡ್ಡ, ಶುಂಭ) ತಲೆ, ಹುರುಳು (ಬುದ್ಧಿವಂತ) ತಲೆ ಎರಡನ್ನೂ ಸಮಾನವಾಗಿ ಕಾಣುವನು. ಸ್ತ್ರೀಯನ್ನು ಪುರುಷನನ್ನು ಸಮಾನವಾಗಿ ಕಾಣುವನು. ಉಭಯತರಲ್ಲೂ ದೇವನನ್ನು ಕಾಣುವನು. ಬಂಧುಬಾಂಧವ(ಅಕ್ಕನ ಗಂಡ)ರಲ್ಲೂ ದೇವನನ್ನು ಕಾಣುವನು– ಏಕೆಂದರೆ ಭೇದಬುದ್ಧಿಯಿಂದ ವ್ಯವಹರಿಸುವ ಭ್ರಾಂತಿಯಳಿದು ವಿಶಾಲಭಾವ, ದೈವೀಭಾವ ಸ್ಥಾಯಿಯಾಗುವುದಾಗಿ.

912. ತೆರಹಿಲ್ಲದ ನಿಲುವು

ತೆರಹಿಲ್ಲದ ನಡೆ, ತೆರಹಿಲ್ಲದ ನುಡಿ
ತೆರಹಿಲ್ಲದ ಸಂಭಾಷಣೆಯ ಸುಖವು.

ತೆರಹಿಲ್ಲದೆ ನಂಬಿದ, ಸ್ವಾನುಭಾವದ ಸುಖವು,
ತೆರಹಿಲ್ಲದ ಮಹಿಮೆ, ತೆರಹಿಲ್ಲದ ವಿಚಾರ
ಲಿಂಗದೇವಾ, ನಿಮ್ಮ ಶರಣಂಗೆ ! –ಬವದೀ. 914

ಮುಚ್ಚು ಮರೆಯಿಲ್ಲದ, ಪಾರದರ್ಶಕವಾದ, ಒಳಹೊರಗೆ ಒಂದೇಯಾಗಿರುವ ನಡೆ, ನೇರವಾದ ಮಾತು, ಮನ ಬಿಚ್ಚಿ ಮಾತನಾಡುವ ಸಂಭಾಷಣೆಯ ಸುಖ ದೃಢವಾಗಿ ನಂಬಿ, ಸ್ವಾನುಭಾವ ಸುಖವನ್ನು ಪಡೆದ ಮನಸ್ಥಿತಿ, ಅಪಾರವಾದ ಮಹಿಮೆಯನ್ನು ಹೊಂದಿದ, ಅದ್ಭುತವಾದ ವಿಚಾರ ಸಂಪತ್ತಿನಿಂದ ಶೋಭಿಸುವ ನಿಲುವು ಲಿಂಗದೇವನ ಶರಣನದು.

913. ನಿಜಾನುಭವವಿಲ್ಲದೆ ಕೆಟ್ಟರು

ಮೂರರಾಪ್ಯಾಯನ ಐದು ಬೆಟ್ಟವನಿಂಬುಗೊಂಡು
ಅಕಟಕಟಾ, ಮಾಡಿ ಕೆಟ್ಟರು, ಮಾಡದೆ ಕೆಟ್ಟರು,
ನೀಡಿ ಕೆಟ್ಟರು, ನೀಡದೆ ಕೆಟ್ಟರು.
ಲಿಂಗದೇವನ ಬಸುರ ಮಧ್ಯದ
ಬಯಲ ಸಮಾಧಿಯಲಿಕ್ಕದೆ ಕೆಟ್ಟರು. –ಬವದೀ. 915

ಹೆಣ್ಣು (ಗಂಡು), ಹೊನ್ನು, ಮಣ್ಣು ಈ ಮೂರನ್ನೂ ಹೊಂದಬೇಕೆಂಬ ಹಂಬಲ, ಆತುರ 5 ಬೆಟ್ಟಗಳಾದ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ಪಂಚವಿಷಯ (ತನ್ಮಾತ್ರೆ)ಗಳನ್ನು ಆವರಿಸಿಕೊಳ್ಳುತ್ತದೆ. ಈ ಜಗತ್ತು ನಿಂತಿರುವುದೇ ಇವುಗಳ ಮೇಲೆ. ಇಂಥಾ ಜಗತ್ತಿನಲ್ಲಿ ಕೆಲವರು ಮಾಡಿ ಕೆಟ್ಟರು, ಇನ್ನು ಕೆಲವರು ಮಾಡದೇ ಕೆಟ್ಟರು. ಕೆಲವರು ಸ್ವಾರ್ಥಿಗಳಾಗಿ ಹೆಣ್ಣು, ಹೊನ್ನು, ಮಣ್ಣನ್ನು ಅನುಭವಿಸುವುದರಲ್ಲೇ ಆಸಕ್ತರಾಗಿ ದಾಸೋಹ, ಸಮಾಜ ಸೇವೆ ಮುಂತಾದ ಎಲ್ಲವನ್ನೂ ಮರೆತರು. ಇವರು "ಮಾಡದೆ ಕೆಟ್ಟವರು" ಆದರು. ಮತ್ತೆ ಕೆಲವರು ಮಾಡಿಯೂ ಕೆಟ್ಟರು. ದಾಸೋಹ, ಸಮಾಜ ಸೇವೆ ಮುಂತಾಗಿ ಮಾಡಿದರಾದರೂ ಆಡಂಬರ ಪ್ರದರ್ಶನಕ್ಕಾಗಿ, ವೈಯಕ್ತಿಕ ಪ್ರಚಾರಕ್ಕಾಗಿ, ಪ್ರತಿಷ್ಠೆಗಾಗಿ ಹಮ್ಮಿನಿಂದ "ಮಾಡಿ ಕೆಟ್ಟರು." ಅದೇ ರೀತಿ ಕೆಲವರು ನೀಡದೆ ಕೆಟ್ಟರೆ ಇನ್ನು ಕೆಲವರು ನೀಡಿ ಕೆಟ್ಟರು. ಗುರು ಬಸವಣ್ಣನವರ ವಿಚಾರದಲ್ಲಿ ಸಮಾಜ ಸೇವೆಯಷ್ಟೆ ಆಂತರಿಕ ಸಾಧನೆಯೂ ಮುಖ್ಯ. ಎರಡನ್ನೂ ಸಮತೋಲನಗೊಳಿಸಿಕೊಂಡು ಸಾಗಬೇಕು. ಎರಡರಲ್ಲಿ ಯಾವುದೊಂದನ್ನೂ ಕಡೆಗಣಿಸುವಂತಿಲ್ಲ. "ಮಾಡಿ ಕೆಡುವ" ಜನರು ಮಾಡಿದ ಲೋಪವೆಂದರೆ ಲಿಂಗದೇವನ ದಿವ್ಯಾನುಭವನ್ನು ಹೊಂದದೆ ಇರುವುದು. ದೇವನನ್ನು ಬಸುರ ಮಧ್ಯದ (ಹೃದಯದಲ್ಲಿ) ಬಯಲ ಸಮಾಧಿಯಲ್ಲಿ ಇಡದೆ ಹೋದುದು.

914. ಸಮರಸ ವೇದ್ಯರಲ್ಲ

ಉಮಾದಿನಾಥರೊಂದು ಕೋಟಿ, ಪಂಚವಕ್ತ್ರರೊಂದು ಕೋಟಿ,
ನಂದಿವಾಹನರೊಂದು ಕೋಟಿ ನೋಡಯ್ಯಾ.
ಸದಾಶಿವರೊಂದು ಕೋಟಿ, ಗಂಗೆವಾಳುಕ ಸಮರುದ್ರರೊಂದು ಕೋಟಿ,
ಇವರೆಲ್ಲರೂ ಕೂಡಲಸಂಗನ ಸಾನ್ನಿಧ್ಯರಲ್ಲದೆ
ಸಮರಸವೇದ್ಯರೊಬ್ಬರೂ ಇಲ್ಲ. –ಬವದೀ. 916

ಉಮಾಪತಿಗಳು ಒಂದು ಕೋಟಿ, ಐದು ಮುಖಗಳುಳ್ಳವರು ಒಂದು ಕೋಟಿ, ನಂದಿಯ ಮೇಲೆ ಸವಾರಿ ಮಾಡುವವರೊಂದು ಕೋಟಿ, ಸದಾಶಿವರು ಒಂದು ಕೋಟಿ. ಗಂಗೆವಾಳುಕರು ಸಮರುದ್ರರು ಒಂದು ಕೋಟಿ, ಇವರೆಲ್ಲರೂ ಶಿವಲೋಕವನ್ನು ನಂಬಿ, ಅಲ್ಲಿ ಶಿವನ (ಕೂಡಲ ಸಂಗನ) ಸನ್ನಿಧಿಯಲ್ಲಿ (ಸಾಮೀಪ್ಯ) ತಾವು ಶಾಶ್ವತವಾಗಿ ಇರುತ್ತೇವೆ ಎಂದುಕೊಂಡವರೇ ವಿನಾ ಲಿಂಗದೇವನೊಡನೆ ಸಾಮರಸ್ಯ ಸಾಧಿಸಬೇಕು ಎಂದು ಯತ್ನಿಸಿದವರಲ್ಲ.

ಶೈವ ಮಾರ್ಗದಲ್ಲಿ ಕೈಲಾಸಕ್ಕೆ ಹೋಗಿ ಚತುರ್ವಿಧ ಪದವಿಯನ್ನು ಪಡೆಯುವುದೇ ಶ್ರೇಷ್ಠ. ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ ಎಂಬುವವೇ ಆ ಚತುರ್ವಿಧ ಪದವಿಗಳು ಸ್ವಲ್ಪವೇ ಪುಣ್ಯ ಪಡೆದವನು

ಶಿವನಂತೆಯೇ ವೇಷಭೂಷಣ ಧರಿಸಿರುವನು. ಇವರೆಲ್ಲರೂ ಪುಣ್ಯ ತೀರುತ್ತಲೇ ಪುನಃ ಕರ್ಮಭೂಮಿಯಾದ ಮರ್ತ್ಯದಲ್ಲಿ ಹುಟ್ಟುವರು. ಸಾಯುಜ್ಯ ಪದವಿ ಪಡೆದವರು ಶಾಶ್ವತವಾಗಿ ಶಿವಲೋಕದಲ್ಲಿ ನೆಲೆಸಿರುವರು. ಲಿಂಗಾಯತ ಧರ್ಮದಲ್ಲಿ ಗುರು ಬಸವಣ್ಣನವರು ಈ ಚತುರ್ವಿಧ ಪದವಿ ಕುರಿತು ನಂಬದೆ ದೇವನೊಡನೆ ಉರಿಯುಂಡ ಕರ್ಪುರದಂತಹ ಸಾಮರಸ್ಯವನ್ನು ಹೇಳುವರು.

915. ಸಮರಸದ ಸುಖ ಅಪೂರ್ವ

ರಕ್ಕಸಿಯ ಮನೆಯಲು ಭೋಜನವನುಂಡು
ತೃಪ್ತಿಯಾಯಿತ್ತೆಂದು ಬೆಸಗೊಂಡಡೆ ಹೇಳಿಹೆನು:
ನೀರ ಕೈಯಲು ಕಿಚ್ಚ ಬಯ್ಕೆಯ ಕೊಟ್ಟಂತೆ !
ಸಾಯುಜ್ಯ ಪದವಿಯನವರು ಎತ್ತ ಬಲ್ಲರು?
ಮಹಾದಾನಿ ಲಿಂಗದೇವರ
ಸಮರಸದ ಸುಖವನವರು ಎತ್ತ ಬಲ್ಲರು? –ಬವದೀ. 917

ಒಬ್ಬ ರಕ್ಕಸಿಯ ಮನೆಯಲ್ಲಿ ಆವನಾದರೊಬ್ಬ ಊಟ ಮಾಡಿ "ನನಗೆ ತೃಪ್ತಿಯಾಯಿತು" ಎಂದು ಹೇಳಿದರೆ ಅದು ಹಾಸ್ಯಾಸ್ಪದ. ಅದು ಹೇಗೆಂದರೆ ನೀರಿನ ಕೈಯಲ್ಲಿ ಬೆಂಕಿಯ ಬಯಕೆಯನ್ನು ಕೊಟ್ಟಂತೆ. ಬೆಂಕಿಗೇನೋ ಉರಿಯಬೇಕೆಂಬ ಹಂಬಲವಿದೆ. ಆದರೆ ನೀರಿನ ಸ್ನೇಹದಿಂದ ಉರಿಯಲಾರದಾಗಿದೆ. ರಾಕ್ಷಸಿಯ ಮನೆಯಲ್ಲಿ ಊಟಕ್ಕೆ ಕುಳಿತರೆ ಭಯದ ವಾತಾವರಣ ಸುತ್ತಲೂ ಇರುವುದರಿಂದ ನೆಮ್ಮದಿಯಾಗಿ, ಸಂತೃಪ್ತಿಯಿಂದ ಉಣ್ಣಲು ಸಾಧ್ಯವೆ ? ಹಾಗೆ ಶೈವದ ಭಕ್ತಿಯಲ್ಲಿ ಭಯದ ಭಾವ ತುಂಬಿರುತ್ತದೆ. ಆದ್ದರಿಂದ ಸಾಯುಜ್ಯ ಪದವಿ ಬಯಸುವ ಜನರಿಗೆ ಮಹಾದಾನಿ ಲಿಂಗದೇವರ ಸಾಮರಸ್ಯದ ಸುಖದ ಹಿರಿಮೆ ಏನು ಗೊತ್ತಿದೆ ? ಇದರಲ್ಲಿ ನಿರ್ಭಯತೆ, ನಿರಾಳ ಮನಸ್ಥಿತಿ ಇರುತ್ತದೆ. ಶೈವದ ಭಕ್ತಿ ಅವೈಜ್ಞಾನಿಕವಾದರೆ (ಉದಾ: ಸಿರಿಯಾಳ) ಲಿಂಗಾಯತದ ಭಕ್ತಿ ವೈಜ್ಞಾನಿಕ.

916. ಬಯಲು ರೂಪ

ಬಯಲ ರೂಪ ಮಾಡಬಲ್ಲಾತನೆ ಶರಣನು,
ಆ ರೂಪ ಬಯಲ ಮಾಡಬಲ್ಲಾತನೆ ಲಿಂಗಾನುಭಾವಿ.
ಬಯಲ ರೂಪ ಮಾಡಲರಿಯದಿದ್ದಡೆ ಎಂತು ಶರಣನೆಂಬೆ?
ಆ ರೂಪ ಬಯಲು ಮಾಡಲರಿಯದಿದ್ದಡೆ
ಎಂತು ಲಿಂಗಾನುಭಾವಿಯೆಂಬೆ?
ಈ ಉಭಯ ಒಂದಾದಡೆ ನಿಮ್ಮಲ್ಲಿ ತೆರಹುಂಟೆ ಲಿಂಗದೇವಾ? –ಬವದೀ. 918

ಪರಮಾತ್ಮನು ಬಯಲ ಸ್ವರೂಪನು. ಇಲ್ಲಿ ಬಯಲು ಎಂದರೆ ಏನೂ ಇಲ್ಲದ ಶೂನ್ಯ(0)ವಲ್ಲ ಎಲ್ಲವನ್ನೂ ಒಳಗೊಂಡ ಪರಿಪೂರ್ಣ ಚೇತನ. ಇಂತಹ ದೇವನು ಗೋಳಾಕಾರದ ಇಷ್ಟಲಿಂಗ ರೂಪದಲ್ಲಿ ಚುಳುಕಾಗಿ ಅಂಗೈಗೆ ಬಂದಿದ್ದಾನೆ. ಈ ಕುರುಹುವಿನಲ್ಲಿ ಪರಮಾತ್ಮನ ಚಿತ್ಕಳೆಯನ್ನು ಆಹ್ವಾನಿಸಿಕೊಳ್ಳಬೇಕಾಗಿದೆ. ಬ್ರಹ್ಮಾಂಡಗತವಾದ ಪರಮಾತ್ಮನ ಚಿತ್ಕಳೆ ಇಷ್ಟಲಿಂಗಕ್ಕೆ ಅವತೀರ್ಣವಾಗುವಂತೆ ಸಾಧನೆ ಮಾಡಿದವನೆ ಶರಣನು. ಇಷ್ಟಲಿಂಗದ ದೃಷ್ಟಿಯೋಗವನ್ನು ಮಾಡುತ್ತ ಅದರ ಮೂಲಕ ರೂಪವನ್ನು ಬಯಲು ಮಾಡುವಂತೆ ಆ ದೈವೀ ಚಿತ್ಕಳೆಯನ್ನು ತನ್ನ ಶರೀರದ ಸರ್ವಾಂಗದಲ್ಲಿ ಅಳವಡಿಸಿಕೊಂಡವನೇ ಲಿಂಗಾನುಭಾವಿ ; ಬ್ರಹ್ಮಾಂಡಗತವಾದ ಬಯಲ ರೂಪಿ (ಭಾವಲಿಂಗ) ದೇವನನ್ನು ಸಾಕ್ಷಾತ್ಕರಿಸಿಕೊಂಡವನೇ ಲಿಂಗಾನುಭಾವಿ. ಈ ಎರಡೂ ಕ್ರಿಯೆಗಳನ್ನು ಮಾಡಲಾರದೆ ಯಾಂತ್ರಿಕವಾಗಿ ಪೂಜೆ ಮಾಡುವವ ಶರಣನಲ್ಲ, ಲಿಂಗಾನುಭಾವಿಯಲ್ಲ ಈ ಎರಡನ್ನೂ ಸಾಧಿಸಿದವನು ಅಪ್ರತಿಮನು.

917. ದೇವಲೋಕ ಮರ್ತ್ಯಲೋಕ ಬೇರಿಲ್ಲ.

ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ
ಕೇವಲ ಶರಣನಾಗಲರಿಯ.

ಸತ್ತು ಬೆರಸಿಹೆನೆಂದಡೆ
ಕಬ್ಬಿನ ತುದಿಯ ಮೆಲಿದಂತೆ ಲಿಂಗದೇವಾ. –ಬವದೀ. 919

ದೇವಲೋಕವೆಂಬುದು ಮರ್ತ್ಯಲೋಕದಿಂದ ಬೇರೆ ಇದೆ ಎಂಬ ಭ್ರಾಂತಿ ಇದ್ದರೆ ಅವನು ಶರಣನಾಗಲು ಅರ್ಹನಲ್ಲ. ಈ ಲೋಕದಲ್ಲಿಯೇ ದೇವಲೋಕ, ನರಕಲೋಕಗಳೆರಡೂ ಇವೆ. ಸತ್ತ ನಂತರ ದೇವಲೋಕ ಸಿಗುತ್ತದೆ ಎಂದು ಭಾವಿಸುವುದು ಕಬ್ಬಿನ ತುದಿಯಲ್ಲಿ ಇರುವ ಒಣ ದಂಟನ್ನು ಜಗಿದಂತೆ. ಈ ಜೀವನದಲ್ಲೇ ದೇವ(ಶರಣ)ಲೋಕವನ್ನು ನಿರ್ಮಾಣ ಮಾಡಿಕೊಳ್ಳುವುದು ಕಬ್ಬನ್ನು ಜಗಿದು ಸಾರವನ್ನು ಹೀರಿದಂತೆ.

918. ಮಾತೇ ಸರ್ವಸ್ವ

ಮಾತಿಲ್ಲ ನುಡಿಯಿಲ್ಲ, ಏತಕ್ಕೆ ಮುನಿದಿರಿ?
ಮಾತಾಡಿದಡೆ ಕೆಯ್ಯ ಬೆಳಸೆಂಬುದನರಿಯಿರಿ ಅಯ್ಯಾ?
ಮಾತು ಕೆಟ್ಟಲ್ಲದೆ ತಾನಾಗಬಾರದು.
ಲಿಂಗದೇವಯ್ಯಾ
ಮಾತಿಂದ ಬರ್ಕು ಭವಭಾರಘೋರ ! –ಬವದೀ. 920

ಕೆಲವರು ಸಣ್ಣ ಸಣ್ಣ ಕಾರಣಕ್ಕೂ ಕೋಪಿಸಿಕೊಳ್ಳುವರು. ಬಹಿರ್ಮುಖ ಸ್ವಭಾವದವರು ಕೋಪ ಬಂದಾಗ ಜಗಳಕ್ಕೆ ಇಳಿದರೆ ಅಂತರ್ಮುಖ ಸ್ವಭಾದವವರು ಮೌನಿಗಳಾಗಿ ಮಾತು ನಿಲ್ಲಿಸಿ, ಮುನಿಯುವರು. ಇಂಥ ಯಾವುದೇ ಪ್ರಸಂಗ ಜರುಗಿದಾಗ ಅವರಿಗೆ ಗುರು ಬಸವಣ್ಣನವರು ಬುದ್ಧಿ ಹೇಳುತ್ತಿದ್ದಾರೆ. ಮಾತಿನಿಂದಲೇ, ಹೊಲದಲ್ಲಿ ಬೆಳೆಯನ್ನು ತೆಗೆಯುವಂತೆ, ಜನರ ಮನದಲ್ಲಿ ವಿಶ್ವಾಸದ ಬೆಳೆಯನ್ನು ತೆಗೆಯಲು ಸಾಧ್ಯ. ಮಾತು ಬಹಳ ಮುಖ್ಯ ; ದಿವ್ಯಾನುಭವದ ಸ್ಥಿತಿ ತಲುಪಿದಾಗ ಮಾತು ಮುಗ್ಧವಾಗುತ್ತದೆ. ಮಾತಿನಿಂದಲೇ ಎಲ್ಲ ಸಮಸ್ಯೆಗಳೂ ಹುಟ್ಟುವವು ; ಮಾತಿನಿಂದಲೇ ಪರಿಹಾರವಾಗುವುವು. ಸಂದರ್ಭಕ್ಕೆ ತಕ್ಕಂತೆ ಮಾತನ್ನಾಡುವ ಕಲೆ ಹೊಂದಿದವನೇ ಜಾಣ.

919. ತನ್ನ ತಾನರಿಯುವಿಕೆ

ಏನನಾದಡೆಯೂ ಸಾಧಿಸಬಹುದು,
ಮತ್ತೇನನಾದಡೆಯೂ ಸಾಧಿಸಬಹುದಯ್ಯಾ
ತಾನಾರೆಂಬುದ ಸಾಧಿಸಬಾರದು,
ಲಿಂಗದೇವರ ಕರುಣವುಳ್ಳವಂಗಲ್ಲದೆ! –ಬವದೀ. 921

ಜೀವನದಲ್ಲಿ ಏನೆಲ್ಲವನ್ನೂ ಗಳಿಸಬಹುದು. ಹೆಂಡತಿ, ಮಕ್ಕಳು, ಸಂಪತ್ತು, ವಿದ್ಯೆ, ಅಧಿಕಾರ ಮುಂತಾಗಿ ಏನೇನೆಲ್ಲ ಸಾಧಿಸಬಹುದು. ಆದರೆ ತಾನಾರು ? ತನ್ನ ಮೂಲವೇನು ? ತನ್ನ ಗುರಿ ಏನು ? ಎಂಬುದನ್ನು ತಿಳಿದುಕೊಳ್ಳುವ ಆತ್ಮಜ್ಞಾನವನ್ನು ಸಂಪಾದಿಸುವುದು ಕಷ್ಟಸಾಧ್ಯ. ತನ್ನ ಸ್ವರೂಪ ಜ್ಞಾನವನ್ನು ಹೊಂದಲಿಕ್ಕೆ ಲಿಂಗದೇವನ ಕರುಣೆ ಪಡೆದವನಿಗಷ್ಟೆ ಸಾಧ್ಯ.

920. ಜೀವಾತ್ಮ ಅಂತರಾತ್ಮ

ಜೀವಾತ್ಮ ಅಂತರಾತ್ಮನ ಸುದ್ದಿಯ ಬೆಸಗೊಂಬಡೆ ಹೇಳಿಹೆ ಕೇಳಿ ಭೋ:
ಹುಸಿಯ ಸಂಕಲೆಯಾಗಿದ್ದಲ್ಲಿ ಕಾದುಕೊಂಡಿದ್ದನೊಬ್ಬ.
ಕಥೆ ಕನಸ ಮಾಡಿ ಹೇಳುತ್ತಿದ್ದನೊಬ್ಬ.
ಪರಾಪರಕ್ಕೆ ಹೋಗಿ ಪರಮನ ಸುದ್ದಿಯ ಕೊಂಡುಬರುತ್ತಿಪ್ಪ
ಅವರಿಬ್ಬರನೂ ಕೆಡೆಮೆಟ್ಟಿ ಹೋಹಾಗ,
ಲೋಕ ನಿರ್ಬುದ್ಧಿಗೊಂಡಿತ್ತು, ಲಿಂಗದೇವಾ. –ಬವದೀ. 922

ಜೀವಾತ್ಮ ಅಂತರಾತ್ಮ ಇವೆರಡರ ಸ್ವರೂಪವನ್ನು ಹೇಳುತ್ತೇನೆ, ಕೇಳಿರಿ. ಒಬ್ಬ ಹುಸಿಯಾದ ಸಂಕೋಲೆಯಿಂದ ಬಂಧಿತನಾಗಿದ್ದಾನೆ. ಆತನೇ ಜೀವಾತ್ಮ. ಆತ್ಮನು ಅಂತಃಕರಣಗಳ ಮಾಲಿನ್ಯದಿಂದ ಆವೃತನಾಗಿ ಜೀವಾತ್ಮ ಎನಿಸಿಕೊಳ್ಳುತ್ತಾನೆ. ಸಾಧನೆಯಿಂದ ಅಂತಃಕರಣಗಳ ಶುದ್ಧಿಯಾದಾಗ ಜೀವಾತ್ಮನು

ಶುದ್ಧಾತ್ಮನಾಗಿ ಪರಮಾತ್ಮನಲ್ಲಿ ಬೆರೆಯಲು ಅರ್ಹನಾಗುತ್ತಾನೆ.

ಅಂತರಾತ್ಮವು ಪರಮಾತ್ಮನ ಪ್ರತಿಬಿಂಬ. ವಿವೇಕ ಎಂಬ ಕನ್ನಡಿಯಲ್ಲಿ ಇದು ಪ್ರತಿಫಲನ ಗೊಂಡುದ್ದಾಗಿರುತ್ತದೆ. ಕಥೆ ಕನಸ ಮಾಡಿ ಹೇಳುವುದು ಈ ಅಂತರಾತ್ಮವೇ !

ಜೀವಾತ್ಮನು ಬ್ರಹ್ಮಾಂಡಗತ ಚೈತನ್ಯವಾದ ಪರಮಾತ್ಮನ ಜೊತೆ ನೇರವಾಗಿ ಸಂಪರ್ಕಿಸುವ ಸಾಮರ್ಥ್ಯ ಉಳ್ಳದಾಗಿರುತ್ತದೆ. ಇದುವೇ ಪರಾಪರಕ್ಕೆ ಹೋಗಿ ಪರಮನ ಸುದ್ದಿಯನ್ನು ತೆಗೆದುಕೊಂಡು ಬರುವಂಥದು. ಅಂತರ್ಮುಖಿಯಾಗಿ ಸಾಧನೆ ಮಾಡುತ್ತ ಜೀವಾತ್ಮ ಅಂತರಾತ್ಮ ಉಭಯತರನ್ನು ಮೆಟ್ಟಿ ಸಾಗಿದಾಗ ಬುದ್ಧಿಯು ಸ್ತಬ್ಧವಾಗುತ್ತದೆ ; ಮಾತು ಮೂಕವಾಗುತ್ತದೆ.

921. ಸಾಧಕರಲ್ಲಿ ವ್ಯತ್ಯಾಸ

ಸಮರತಿ, ಸಮಕಳೆ, ಸಮಸುಖ, ಸ್ವಾನುಭಾವ
ಹಿರಿದು ಕಿರಿದಾದುದನಾರೂ ಅರಿಯರು.
ಪಾಷಾಣಪರೀಕ್ಷೆವಂತನಂತೆ
ಗುರುವಿಲ್ಲದವರಂತಿರಲಿ ಲಿಂಗದೇವಯ್ಯಾ,
ಗುರುವುಳ್ಳವರ ನಿಜವಿಂತುಟು!

–ಬವದೀ. 923

ಅಧ್ಯಾತ್ಮಿಕ ಸಾಧನೆಯಲ್ಲಿ ಲಭ್ಯವಾಗುವ ಸಮರತಿ, ಸಮಕಳೆ, ಸಮಸುಖ, ಸ್ವಾನುಭಾವ ವ್ಯಕ್ತಿ ವ್ಯಕ್ತಿಗಳಿಗೆ ಬದಲಾಗುತ್ತದೆ. ಪಾಷಾಣ ಪರೀಕ್ಷೆವಂತನು ವಿವಿಧ ಶಿಲೆಗಳನ್ನು ನೋಡುತ್ತಲೇ ಅವುಗಳ ಮಟ್ಟ ನಿರ್ಧರಿಸುವನು. ಬೆಣಚುಕಲ್ಲು ಕಲ್ಲೇ, ಸ್ಫಟಿಕವೂ ಕಲ್ಲೇ, ವಜ್ರವೂ ಕಲ್ಲೇ. ಅವುಗಳ ಸ್ಥಾನಮಾನವು ಬೇರೆ ಬೇರೆ. ಹಾಗೆಯೇ ಸಾಧಕರಲ್ಲಿಯೂ ವ್ಯತ್ಯಾಸ ಬೇರೆ ಬೇರೆ ಮಟ್ಟದಲ್ಲಿ ಇರುವುದು. ಗುರುಕಾರುಣ್ಯ ಪಡೆಯದವರ ವಿಷಯ ಅತ್ತಲಿರಲಿ, ಗುರುಕಾರುಣ್ಯ ಪಡೆದವರು ಸಹ ಒಂದೇ ಮಟ್ಟದಲ್ಲಿರುವುದಿಲ್ಲ. ಅವರವರ ಸಾಧನೆಗೆ ಅನುಸಾರವಾಗಿ ಅವರ ಅಧ್ಯಾತ್ಮಿಕ ಮಟ್ಟವಿರುತ್ತದೆ.

922. ಪೂರ್ವಾಶ್ರಯ ನಿರಸನ

ಗುರುಶಿಷ್ಯ ಸಂಬಂಧವಾದುದಕ್ಕೆ ಇದು ಚಿಹ್ನೆ:
ಹಿಂದ ಬಿಟ್ಟು ಮುಂದೆ ಹಿಡಿಯಲೇ ಬೇಕು.
ಲಿಂಗದೇವ ಕೇಳಯ್ಯಾ,
ಕಿಚ್ಚಿನೊಳಗೆ ಕೋಲ ಬೈಚಿಟ್ಟಂತಿರಬೇಕು!

–ಬವದೀ. 924

ಅಧ್ಯಾತ್ಮಿಕ ಜೀವನದಲ್ಲಿ ದೀಕ್ಷಾನುಗ್ರಹ ಬಹಳ ಮಹತ್ವಪೂರ್ಣ ಘಟನೆ ; ವ್ಯಕ್ತಿಗಳ ಜೀವನದ ದಿಕ್ಕನ್ನೇ ಬದಲಿಸುವಂತಹುದು. ದೀಕ್ಷಾನಂತರ ಶಿಷ್ಯರಲ್ಲಿ ಅಪಾರ ಬದಲಾವಣೆಯಾಗಬೇಕು. ಹಿಂದಿನ ಆಚರಣೆಗಳನ್ನು ಬಿಟ್ಟು ತತ್ತ್ವನಿಷ್ಠನಾಗಬೇಕು. ದುರಾಚಾರವಿದ್ದರೆ ಅದನ್ನು ಬಿಟ್ಟು ಸದಾಚಾರಿಯಾಗಬೇಕು. ಬಹುದೇವತೋಪಾಸನೆ, ವೈದಿಕಾಚರಣೆ, ಮೂಢಾಚರಣೆಗಳನ್ನು ತೊರೆದು ಏಕದೇವೋಪಾಸಕರಾಗಬೇಕು. ಉರಿಯುವ ಕಿಚ್ಚಿನಲ್ಲಿ ಒಂದು ಕೋಲನ್ನು ಬಚ್ಚಿಟ್ಟರೆ ಅದು ಹೇಗೆ ಬೆಂಕಿಯ ಸ್ವರೂಪವೇ ಆಗುವುದೋ ಹಾಗೆ ಇಷ್ಟಲಿಂಗ ದೀಕ್ಷಾನಂತರದಲ್ಲಿ ಜ್ಞಾನಾತ್ಮಕ ಮಾರ್ಗವನ್ನು ಹಿಡಿಯಬೇಕು.

923. ಲಿಂಗಪೂಜೆಯ ಮರ್ಮ

ಲಿಂಗವ ಪೂಜಿಸಿ ಫಲವೇನಯ್ಯಾ,
ಸಮರತಿ ಸಮಕಳೆ ಸಮಸುಖವನರಿಯದನ್ನಕ್ಕ?
ಲಿಂಗವ ಪೂಜಿಸಿ ಫಲವೇನಯ್ಯಾ,
ಲಿಂಗದೇವರ ಪೂಜಿಸಿ
ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ?

–ಬವದೀ. 925

ಇಷ್ಟಲಿಂಗವನ್ನು ಪೂಜಿಸುವ ಉದ್ದೇಶದ ಹಿಂದೆ ಕೇವಲ ಭಕ್ತಿಯ ತೃಪ್ತಿಯಿರುವುದು ಮಾತ್ರವಲ್ಲ. ಇಲ್ಲಿ

ಯೋಗಸಾಧನೆ ಇದೆ. ದೃಷ್ಟಿಯೋಗವನ್ನು ಮಾಡುವ ಸಾಧಕ ಅರೆತೆರೆದ ಕಣ್ಣುಗಳಿಂದ ಇಷ್ಟಲಿಂಗವನ್ನು ದಿಟ್ಟಿಸಿ ನೋಡುತ್ತ ಸಾಮರಸ್ಯ, ಸಮಕಳೆ, ಸಮಸುಖವನ್ನು ಅನುಭವಿಸಬೇಕು. ಇಷ್ಟಲಿಂಗವನ್ನು ಪೂಜಿಸಿ ಮನಸ್ಸು ದೇವನಲ್ಲಿ ಭಾವೈಕ್ಯ ಸ್ಥಿತಿಯನ್ನು ಹೊಂದಬೇಕು-ನದಿಯೊಳಗೆ ನದಿ ಬೆರೆಸಿದಂತೆ ! ಇಂಥ ಆನಂದವನ್ನು ಅನುಭವಿಸದೆ ಇದ್ದರೆ ಆ ಪೂಜೆ ಕೇವಲ ಯಾಂತ್ರಿಕವಾಗುತ್ತದೆ.

924. ಕುಂಡಲಿನಿ ಜಾಗೃತಿ

ಒಲೆಯಡಿಯನುರುಹಿದಡೆ
ಹೊಗೆ ಗೋಳಕನಾಥನ ಕೊರಳ ಸುತ್ತಿತ್ತು,
ಮಹೀತಳನ ಜಡೆ ಸೀಯಿತ್ತು, ಮರೀಚಕನ ಶಿರ ಬೆಂದಿತ್ತು,
ರುದ್ರನ ಹಾವುಗೆ ಉರಿಯಿತ್ತು, ದೇವಗಣಂಗಳು ನಿವಾತವಾದರು,
ಮಡದಿಯರೈವರು ಮುಡಿಯ ಹಿಡಿದುಕೊಂಡು ಹೋದರು,
ಲಿಂಗದೇವ ಭಸ್ಮಧಾರಿಯಾದ!

–ಬವದೀ. 926

ಒಲೆ ಎಂದರೆ ಆಧಾರ ಚಕ್ರ ; ಅದರ ಕೆಳಗಿದೆ ಕುಂಡಲಿನಿ ಶಕ್ತಿ. ಉರುಹಿ ಅದನ್ನು ಜಾಗೃತಗೊಳಿಸಿದರೆ ಅದು ಮೇಲೇರುವುದು. ಸ್ವಾಧಿಷ್ಠಾನ (ಗೋಳಕ ನಾಥನ ಕೊರಳು) ಚಕ್ರಕ್ಕೆ ಸಾಗುವುದು. ಮುಂದೆ ಮಣಿಪೂರಕ ಚಕ್ರ (ಮಹೀತಳ)ವನ್ನು ಸ್ಪರ್ಶಿಸಿ ಅನಾಹತ ಚಕ್ರ (ಮರೀಚಕನ ಶಿರ)ಕ್ಕೆ ಏರುವುದು. ನಂತರ ವಿಶುದ್ಧಿ ಚಕ್ರ (ರುದ್ರನ ಹಾವುಗೆ)ಕ್ಕೆ ಏರಿ ಆಜ್ಞಾಚಕ್ರ (ದೇವಗಣಂಗಳು)ದಲ್ಲಿ ನೆಲೆ ನಿಲ್ಲುವುದು. ಮಡದಿಯರೈವರು ಎಂದರೆ ಪಂಚ ವಿಷಯಂಗಳು ಅರ್ಥಾತ್ ತನ್ಮಾತ್ರೆಗಳು ಮುಡಿಯ ಹಿಡಿದುಕೊಂಡು ಓಡಿ ಹೋದರು. ಸಾಧಕ ಶರಣನು ಸಹಸ್ರಾರದಲ್ಲಿ ನೆಲೆ ನಿಲ್ಲುವನು. (ಲಿಂಗದೇವ ಭಸ್ಮಧಾರಿಯಾದ) ದಿವ್ಯಾನಂದವನ್ನು ಅನುಭವಿಸುವನು.

925. ದಿವ್ಯಾನುಭವ

ಆ ಭಸ್ಮ ತಾಗಿ ಬ್ರಹ್ಮ ತನ್ನ ಕಪಾಲವಿಡಿದನು.
ಗಣನಾಥನ ಐವತ್ತೆರಡು ಸರ ಹರಿದುಬಿದ್ದವು!
ಆ ಭಸ್ಮ ತಾಗಿ ಅಂಡಜಮುಗ್ಧೆಯ ಮೂರು ಮೊಲೆ ಹರಿದು ಬಿದ್ದವು.
ನಾದಪ್ರಿಯ ನಂದಿಯನೇರಿಕೊಂಡು
ಅತೀತನ ಮೇಲೆ ಆನಂದ ಸಿಂಹಾಸನವನಿಕ್ಕಿ ಕುಳಿತು,
ಲಿಂಗದೇವರ ದೇವತ್ವ ಕೆಟ್ಟಿತ್ತು!

–ಬವದೀ. 927

ಹಿಂದಿನ ವಚನದ ಮುಂದುವರಿದ ಭಾಗದಂತಿದೆ ಈ ವಚನ. ಆ ಭಸ್ಮ=ದಿವ್ಯಾನಂದ ತಾಗಿ ಬ್ರಹ್ಮ ಕಪಾಲವಿಡಿದನು. ಅಂದರೆ ಸಹಸ್ರಾರದಲ್ಲಿ ಕುಂಡಲಿನಿಯು ನಿಂತಾಗ ಅಪಾರವಾದ ಬೆಳಕು ಕಾಣುವನು. ಐವತ್ತೆರಡು ಅಕ್ಷರಗಳ ಮಾಲೆಯಾದ ಭಾಷೆಯು ನಿಂತುಹೋಗುವುದು. ಅಂಡಜ ಮುಗ್ಧೆಯ ಮೂರು ಮೊಲೆಗಳು ಅಂದರೆ ಈಷಣ ತ್ರಯಗಳಾದ ಹೆಣ್ಣು, ಹೊನ್ನು, ಮಣ್ಣುಗಳ ಮೋಹವು ಅಳಿಯುವುದು. ನಾದ ಪ್ರಿಯ ನಂದಿಯನೇರಿಕೊಂಡು ಎಂದರೆ ಅನಾಹತ (ಹೃದಯ) ನಾದವು ಅತೀತನ ಮೇಲೆ ಅಂದರೆ ಜೀವಾತ್ಮನ ಮೇಲೆ ಆನಂದ ಸಿಂಹಾಸನವನ್ನಿಕ್ಕಿ ಕುಳಿತಾಗ ಲಿಂಗದೇವನ "ದೇವತ್ವ ಕೆಟ್ಟು" ಅವನು ಈ ಜೀವಾತ್ಮನೊಡನೆ ಒಂದಾಗುವನು.

926. ಬೇಟೆಯ ಬಗೆ.

ನಾನೊಮ್ಮೆ ಬೇಂಟೆಯ ಹೋದಡೆ ಭಸಿತಕ್ಕಾಹುತಿಯನಿಕ್ಕಿಹೆನೆಂದು
ಸಾಸಿರದೇಳುನೂರು ವರುಷ ಒಬ್ಬ ರಾಜನ ಕೊಂದೆನು.
ಅವನ ಹೆಂಡತಿ ಐವತ್ತೆರಡು ಕಣ್ಣವಳು,
ಅವಳು ತನ್ನ ಹೂಮುಡಿಯ ಬಿಟ್ಟು ಅತ್ತಳು.
ಅವಳ ಬಾಯಲ್ಲಿ ಅಜ ಬಿದ್ದ, ಕಂಗಳಲ್ಲಿ ಧೂಮಕೇತು ಬಿದ್ದ.
ಲಿಂಗದೇವರ ದೇವತ್ವ ಕೆಟ್ಟಿತ್ತು!

–ಬವದೀ. 928

ಇದು ಬೆಡಗಿನ ವಚನವಿದ್ದು, ಅರ್ಥವಾಗುತ್ತಿಲ್ಲ. ಮತ್ತೆ ಪ್ರಯತ್ನಿಸಲಾಗುವುದು.

927. ದೀನರೊಡನೆ ಸಮೀಕರಣ.

ಲಿಂಗಾರ್ಚನೆಯ ಮಾಡುವ ಮಹಿಮರೆಲ್ಲರೂ
ಸಲಿಗೆವಂತರಾಗಿ ಒಳಗೆ ಐದಾರೆ.
ಆನು ದೇವಾ ಹೊರಗಣವನು.
'ಸಂಬೋಳಿ ಸಂಬೋಳಿ' ಎನ್ನುತ್ತ ಇಂಬಿನಲ್ಲಿ ಇದೇನೆ!
ಲಿಂಗದೇವಾ, ನಿಮ್ಮ ನಾಮವಿಡಿದ ಅನಾಮಿಕ ನಾನು! -ಬವದೀ. 929

ಗುರು ಬಸವಣ್ಣನವರು ಸದಾಚಾರ ಸಹಿತವಾದ ಅಹಿಂಸಾ ಪ್ರಧಾನವಾದ ಒಂದು ಹೊಸ ಧರ್ಮ-ಲಿಂಗಾಯತವನ್ನು ಕೊಟ್ಟಾಗ ಮೇಲ್ಜಾತಿಯವರು ಬೇಗನೆ ಈ ಧರ್ಮಕ್ಕೆ ಆಕರ್ಷಿತರಾಗಿ ಬಂದರು. ಗುರು ಬಸವಣ್ಣನವರಿಗೆ ದೀನದಲಿತರ ಬಗ್ಗೆ ಅಪಾರ ಅನುಕಂಪವಿದ್ದಿತು. ಧರ್ಮ, ದೇವರು, ಸಂಸ್ಕಾರ ಇಲ್ಲದ ಅವರು ಉತ್ತಮ ಮಟ್ಟಕ್ಕೆ ಏರಬೇಕೆಂಬ ಆಶಯ ಅವರದು. ಹೀಗಾಗಿ ಶೂದ್ರಾದಿ ದಲಿತರ ಬರವನ್ನು ಅವರು ಹೆಚ್ಚು ನಿರೀಕ್ಷಿಸುತ್ತಿದ್ದರು. ಅದನ್ನು ಈ ವಚನದಲ್ಲಿ ಬಿಂಬಿಸಿದ್ದಾರೆ. ಲಿಂಗಾರ್ಚನೆಯ ಮಾಡುವ ಮಹಿಮರೆಲ್ಲರೂ ಈಗಾಗಲೇ ದೀಕ್ಷಾವಂತ (ಸಲಿಗೆವಂತ)ರಾಗಿ ಒಳಗೆ ಇದ್ದಾರೆ. ಆದರೆ ನಾನು ಹೊರಗೆ ನಿಂತು ಶೋಷಿತರಾದ ದಲಿತರ ಬರವಿಗಾಗಿ ಕಾಯುತ್ತಿದ್ದೇನೆ. ನನ್ನ ಮೇಲೆ ಅವರಿಗೆ ವಿಶ್ವಾಸ ಬರಲೆಂದು "ಸಂಬೋಳಿ ಸಂಬೋಳಿ" ಎಂದು ಕೂಗುತ್ತಿದ್ದೇನೆ. ಆ ಕಾಲದಲ್ಲಿ ಅಸ್ಪೃಶ್ಯರು ಉತ್ತಮರ ಕೇರಿಗೆ ಏನಾದರೂ ಸ್ವಚ್ಛತಾ ಕೆಲಸಕ್ಕೆ ಬರಬೇಕಾದರೆ (ಉದಾ : ಸತ್ತ ದನದ ಶವ ಒಯ್ಯಲು) ಬಾಯಲ್ಲಿ ಒಂದು ಮಡಿಕೆ, ಸೊಂಟದ ಹಿಂಭಾಗಕ್ಕೆ ಒಂದು ಕಸಬರಿಕೆ ಕಟ್ಟಿಕೊಂಡು ಸಂಬೋಳಿ ಸಂಬೋಳಿ ಎಂದು ಕೂಗುತ್ತ ಬರಬೇಕಿತ್ತು. ಅವರ ಎಂಜಲು ನೆಲದ ಮೇಲೆ ಬೀಳಬಾರದೆಂದು ಮಡಿಕೆ, ಅವರ ಹೆಜ್ಜೆ ಗುರುತು ಅಳಿಸಲು ಕಸಬರಿಕೆ ಇರುತ್ತಿದ್ದವು. ಸಂಬೋಳಿ ಶಬ್ದ ಕೇಳಿ ಉತ್ತಮರು ಮನೆಯೊಳಕ್ಕೆ ಹೋಗುತ್ತಿದ್ದರು. ಹೀಗೆ ಸಂಬೋಳಿ ಪದ ದಲಿತರ ಧ್ವನಿಯಾಗಿತ್ತು. ಗುರು ಬಸವಣ್ಣನವರು ತಮ್ಮನ್ನು ದಲಿತರೊಡನೆ ಗುರುತಿಸಿಕೊಂಡು ಸಂಬೋಳಿ ಎನ್ನುತ್ತ ಧರ್ಮ ಮಂದಿರದೊಳಕ್ಕೆ ದಲಿತರ ಬರವನ್ನು ನಿರೀಕ್ಷಿಸುತ್ತಿದ್ದಾರೆ. "ಲಿಂಗದೇವಾ, ನಿಮ್ಮ ಹೆಸರನ್ನು ಹೇಳಿಕೊಂಡು ಬದುಕುವ ನಾನು ಸಾಮಾನ್ಯರಲ್ಲಿ ಸಾಮಾನ್ಯನು ಎನ್ನುತ್ತಾರೆ ಗುರು ಬಸವಣ್ಣನವರು.

928. ಮೂರ್ತಿ ಪೂಜೆ ಸಲ್ಲದು.

ಶಿವಶಿವಾ, ಮೂರ್ತಿಗೆ ಸತ್ಯಶುದ್ಧ ಉಂಟೆಂಬಿರಿ:
ಸತ್ಯಶುದ್ಧವುಳ್ಳವಂಗೆ ಗುರುವಿಲ್ಲ, ಸತ್ಯಶುದ್ಧವುಳ್ಳವಂಗೆ ಲಿಂಗವಿಲ್ಲ,
ಸತ್ಯಶುದ್ಧವುಳ್ಳವಂಗೆ ಜಂಗಮವಿಲ್ಲ, ಸತ್ಯಶುದ್ಧವುಳ್ಳವಂಗೆ ಪ್ರಸಾದವಿಲ್ಲ,
ಸತ್ಯಶುದ್ಧವುಳ್ಳವಂಗೆ ಗಣತ್ವವಿಲ್ಲ ಕೇಳಿರೆ.
ಸತ್ಯಶುದ್ಧ ದೇವರಿಗೆ ಉಪಚಾರವುಂಟು,
ಸತ್ಯಶುದ್ಧ ದೇವರಿಗೆ ಧ್ಯಾನ ಮೌನ ಅನುಷ್ಠಾನವುಂಟು,
ಸತ್ಯಶುದ್ಧ ಉಪದೇಶಕ್ಕೆ ಜಪ ತಪ ಸಂಜೆ ಸಮಾಧಿ
ಹೋಮ ನೇಮ ನಿತ್ಯ ಅಷ್ಟವಿಧಾರ್ಚನೆ ಷೋಡಶೋಪಚಾರವುಂಟು!
ಆದಕಾರಣ ಇಂತಪ್ಪ ಸತ್ಯಶುದ್ಧ ಗುರುವಿಂಗೆ ಶರಣೆನ್ನೆ,
ಇಂತಪ್ಪ ಸತ್ಯಶುದ್ಧ ಲಿಂಗಕ್ಕೆ ಶರಣೆನ್ನೆ,
ಇಂತಪ್ಪ ಸತ್ಯಶುದ್ಧ ಜಂಗಮಕ್ಕೆ ಶರಣೆನ್ನೆ,
ಇಂತಪ್ಪ ಸತ್ಯಶುದ್ಧ ಪ್ರಸಾದಕ್ಕೆ ಕೈಯಾನೆ!
ಇವರೆಲ್ಲರು ಬ್ರಹ್ಮನ ಮಕ್ಕಳು!
ಎನಗೆ ಸತ್ಯವೂ ಇಲ್ಲ, ಅಸತ್ಯವೂ ಇಲ್ಲ.
ಆವ ಸಹಜವೂ ಇಲ್ಲದ ಲಿಂಗೈಕ್ಯ ಕಾಣಾ,
ಲಿಂಗದೇವಾ.
-ಬವದೀ. 930

"ಇಷ್ಟಲಿಂಗಕ್ಕೆ ಶ್ರೀ ಗುರುವು ಚಿತ್ಕಳೆ ತುಂಬಿ ಕೊಡುವನು. ಬೇರೆ ಮೂರ್ತಿಗಳಿಗೆ ಆ ಬಗೆಯ ಸಂಸ್ಕಾರವಿರುವುದಿಲ್ಲ. ಆದ್ದರಿಂದ ಇಷ್ಟಲಿಂಗ ಹೊರತು ಬೇರೆ ಮೂರ್ತಿಗಳನ್ನು ಪೂಜಿಸಬಾರದು." ಎಂದು

ಲಿಂಗಾಯತ ಧರ್ಮದ ಗುರುವು ತನ್ನ ಅನುಯಾಯಿಗಳಿಗೆ ಹೇಳಿದಾಗ ಅವರು "ಮೂರ್ತಿಗಳಿಗೂ ಪ್ರಾಣ ಪ್ರತಿಷ್ಠೆ ಅಂತ ಇರುತ್ತದೆ ; ಅವಕ್ಕೂ ಸತ್ಯಶುದ್ಧತೆ ಇರುತ್ತದೆ" ಎಂದು ಮಾರುತ್ತರ ಕೊಡುತ್ತಾರೆ. ಎಲ್ಲೆಲ್ಲೋ ಮಾರಾಟಕ್ಕೆ ಸಿಗುವ ಮೂರ್ತಿಗಳನ್ನು ತಂದು ಇಟ್ಟುಕೊಂಡು ಪೂಜೆ ಮಾಡುವ ಮೂರ್ತಿಪೂಜಕರಿಗೆ ದೀಕ್ಷಾಗುರು ಇರುವುದಿಲ್ಲ ; ಪೂಜಿಸಲು ಇಷ್ಟಲಿಂಗವಿರುವುದಿಲ್ಲ. ಜ್ಞಾನ ನೀಡುವ ಜಂಗಮ ಇರುವುದಿಲ್ಲ; ಕರುಣ ಪ್ರಸಾದವಿರುವುದಿಲ್ಲ. ಒಂದು ಧಾರ್ಮಿಕ ಸಮೂಹ(Religious community)ದ ಸದಸ್ಯತ್ವ (ಗಣತ್ವ)ವಿರುವುದಿಲ್ಲ.

ಮೂರ್ತಿಗಳಿಗೆ ವಿವಿಧ ಬಗೆಯ ಉಪಚಾರ ಉಂಟು. ಧ್ಯಾನ ಮೌನ ಅನುಷ್ಠಾನವುಂಟು. ಮೂರ್ತಿ ಪೂಜಕರಿಗೆ ಜಪ, ತಪ, ಸಂಜೆ, ಸಮಾಧಿ, ಹೋಮ, ನೇಮ, ನಿತ್ಯ ಅಷ್ಟವಿಧಾರ್ಚನೆ ಷೋಡಷೋಪಚಾರ ಉಂಟು. ಆದ್ದರಿಂದ ನಾನು ಮೂರ್ತಿ ಪೂಜಕರಾದ ಗುರುವಿಗೆ ಶರಣೆನ್ನೆ. ಸ್ಥಾವರ ಲಿಂಗಕ್ಕೆ ಶರಣೆನ್ನೆ, ಮೂರ್ತಿ ಪೂಜಕ ಜಂಗಮಕ್ಕೆ ಶರಣೆನ್ನೆ, ಅನ್ಯ ಮೂರ್ತಿಗಳ ಪ್ರಸಾದಕ್ಕೆ ಕೈಯಾನೆ. ಏಕೆಂದರೆ ಮೂರ್ತಿ ಪೂಜಕರು ಬ್ರಹ್ಮನ ಮಕ್ಕಳು, ಅವರಿಗೆ ಗುರು ಕರುಣೆ ಇಲ್ಲ. ನಾನು ಇವೆಲ್ಲವನ್ನೂ ಮೀರಿದ ಲಿಂಗೈಕ್ಯನು.

ವಿ.ಸೂ : ಈ ವಚನ ಪೂರ್ತಿ ಅಶುದ್ಧವಾಗಿದೆ. ಸಾಧ್ಯವಾದಷ್ಟೂ ಸುಸಂಬದ್ಧವಾಗಿ ಅರ್ಥ ಮಾಡಲು ಯತ್ನಿಸಿದ್ದೇನೆ.

929. ದಾಸೋಹವೇ ಶ್ರೇಷ್ಠ

ಭಕ್ತನಾಯಿತ್ತೆ ಭಕ್ತಿದಾಸೋಹ,
ಯುಕ್ತನಾಯಿತ್ತೆ ಯುಕ್ತಿದಾಸೋಹ;
ಐಕ್ಯನಾಯಿತ್ತೆ ಮಮಕಾರ ದಾಸೋಹ,
ಸರ್ವದಲ್ಲೂ ದಾಸೋಹವೇ ಬೇಕು;
ಈ ದಾಸೋಹದ ಅನುವ ಲಿಂಗದೇವಯ್ಯ ತಾನೆ ಬಲ್ಲ. -ಬವದೀ. 931

ಭಕ್ತನೇ ಆಗಿದ್ದರೆ ಭಕ್ತಿಯಿಂದ ಗುರು ಜಂಗಮಕ್ಕೆ ದಾಸೋಹ ಮಾಡಬೇಕು. ಯುಕ್ತ ಅರ್ಥಾತ್ ಜ್ಞಾನಿಯೇ ಆಗಿದ್ದರೆ ತನ್ನಲ್ಲಿರುವ ಜ್ಞಾನವನ್ನು ಹಂಚುವ ಜ್ಞಾನದಾಸೋಹ ಮಾಡಬೇಕು. ಐಕ್ಯನೇ ಆಗಿದ್ದರೆ ಎಲ್ಲರನ್ನೂ ಮಮಕಾರದಿಂದ ಕಾಣುವ ಆತ್ಮೀಯತೆ ಎಂಬ ದಾಸೋಹ ಮಾಡಬೇಕು. ಎಲ್ಲ ರೀತಿಯಲ್ಲೂ ದಾಸೋಹವೇ ಮುಖ್ಯ. ಈ ದಾಸೋಹದ ಮರ್ಮವನ್ನು ಲಿಂಗದೇವನೇ ಬಲ್ಲ. ಅವನು ಒಲಿಯುವುದು ದಾಸೋಹ (ಸೇವೆ)ಕ್ಕೆ.

(ಮುಂದುವರಿಯುವುದು.......)

ವಧು ವರಾನ್ವೇಷಣೆ ವಿಭಾಗ

1. ಡಾ॥ ಎಮ್. ಚಂದ್ರಶೇಖರ್, MBBS, MD, (Phy), ತಂದೆ-ಎಮ್ ಚನ್ನಪ್ಪ, ವಾಸ-ಮಿಲ್ಲರ್ ಪೇಟ್, ಬಳ್ಳಾರಿ, ಜನ್ಮ ದಿನಾಂಕ : 29-6-1978, Thursday 12.45 pm, Height-6'-4", Fair, Cell No. 99862 50303 / 88846 51148. ವಧು : MBBS ಆಗಿರಬೇಕು.
2. ಪ್ರತಿಭಾ. ತಂದೆ ಅಜ್ಜಣ್ಣ, ತಾಯಿ. ಸಾವಿತ್ರಮ್ಮ ಊರು ಚಳ್ಳಕೆರೆ. ಜನ್ಮ ದಿನಾಂಕ-1982 ಶಿಕ್ಷಣ : ಬಿ.ಎ, ದೂರವಾಣಿ : 08195-222775, 94814 15427. ಬಸವ ತತ್ತ್ವದ ವರ. ಸರಕಾರಿ ನೌಕರಿ ಅಥವಾ ಬಿಜಿನೆಸ್

ವಧು-ವರರ ವಿವರಗಳನ್ನು ಸತತವಾಗಿ ಮೂರು ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು. ಆದ್ದರಿಂದ ವಧು-ವರಾನ್ವೇಷಿಗಳಾದವರು ಇನ್ನು ಮುಂದೆ ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ 500/-ರೂ.ಗಳ ಎಂ.ಓ/ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟ್ ತೆಗೆದು ವಿವರಗಳೊಡನೆ ಕಳಿಸಬೇಕಾಗಿ ಕೋರಿಕೆ. ಹಣ ಕಳಿಸದಿದ್ದರೆ ವಿವರಗಳನ್ನು ಪ್ರಕಟಿಸಲಾಗುವುದಿಲ್ಲ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ :
ಶರಣ. ಚಂದ್ರಮೌಳಿ ಎಮ್ಮಿಗನೂರು, ದೂ. 9448466805

ರಾಮನಗರದ ಐಜೂರಿನಲ್ಲಿ ಪ್ರವಚನ ಕಾರ್ಯಕ್ರಮ

ಪೂಜ್ಯ ಶ್ರೀ ಸದ್ಗುರು ಮಾತೆ ಸತ್ಯಾದೇವಿಯವರ ಪ್ರವಚನವು ರಾಮನಗರ ಸಮೀಪದ ಐಜೂರಿನ ಶ್ರೀ ಮಲ್ಲೇಶ್ವರ ಸ್ವಾಮಿ ದೇವಸ್ಥಾನದಲ್ಲಿ ದಿ.14-5-2012ರಂದು ಪ್ರಾರಂಭವಾಯಿತು. 25 ದಿನಗಳ ಕಾಲ ಅವ್ಯಾಹತವಾಗಿ ನಡೆದು ಮಾತೃ(ಶುಕ್ರ)ವಾರ ದಿ.8-6-2012 ರಂದು ರಾಮನಗರದ ಶ್ರೀ ಬಸವೇಶ್ವರ ಸ್ವಾಮಿ ದೇವಾಲಯದ ಕಲ್ಯಾಣ ಮಂಟಪದಲ್ಲಿ ಸಮಾರೋಪಗೊಂಡಿತು. ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ನಡೆದ ಮುಕ್ತಾಯ ಸಮಾರಂಭದಲ್ಲಿ ಅಕ್ಕನ ಬಳಗದ ಅಧ್ಯಕ್ಷೆ ಶರಣೆ. ಶಿವಮ್ಮನವರು ಪೂಜ್ಯ ಮಾತಾಜಿಯವರನ್ನು ಸತ್ಕರಿಸಿದರು. ದಾನಿಗಳನ್ನು ಶಾಲು ಹೊದ್ದಿಸಿ ಸತ್ಕರಿಸಲಾಯಿತು.

25ನೆಯ ಶರಣ ಮೇಳದ ಹಿರಿಮೆ

ಶರಣ ಮೇಳವು ಎಂದೂ ಅಳಿಯದ
ಶ್ರೇಷ್ಠ ದಾಖಲೆ ಸ್ಥಾಪಿಸುತಿದೆ
ಈ ಕನ್ನಡ ತಾಯಿಯ ಮಡಿಲಲ್ಲಿ
ಬಸವ ತತ್ತ್ವದ ಸಿರಿಯಲ್ಲಿ
ಬಸವ ಧರ್ಮದ ಪೀಠವ ಸ್ಥಾಪಿಸಿ
ಬಸವ ಕುಡಿಗಳ ವೃದ್ಧಿಸಿದೆ
ಮಾತೆಯ ಮಮತೆಯ ಕರೆಯ ಮೇರೆಗೆ
ಶರಣರ ಸಂಕುಲ ಸೇರುತಿದೆ
ಜಾತೀಯತೆಯ ಮೌಢ್ಯವ ತೊಡೆದು
ಸಮಾನತೆ ತತ್ತ್ವವ ಮೆರೆಸುತಿದೆ
ಅಬಲೆಯರನ್ನು ಸಬಲರ ಮಾಡಿ
ಸ್ತ್ರೀಕುಲ ಸ್ವಾತಂತ್ರ್ಯ ಸಾರುತಿದೆ.
ಬಸವ ತತ್ತ್ವದ ಕೀರ್ತಿ ಪತಾಕೆಯ
ಎಲ್ಲೆಡೆ ಹಾರಿಸಿ ಮೆರೆಸುತಿದೆ
ವಚನ ತತ್ತ್ವದ ಸೌರಭವನ್ನು
ಶರಣ ಮೇಳವು ಸೂಸುತಿದೆ
ಅಷ್ಟಾವರಣವ ಧರಿಸಿದ ಶರಣರು
ಶಿಸ್ತಿನ ಸಿಪಾಯಿಯಂತೆ ಕಾಣುವರು
ಕಾಯಕ ದಾಸೋಹ ಸೇವೆಯಲ್ಲಿ
ತಮ್ಮ ಕಾಯವ ಸವೆಸುವರು
ದಯವೇ ಧರ್ಮದ ಮೂಲವು ಎನ್ನುತ
ಧರ್ಮದ ಬಾಗಿಲ ತೆರೆಯುತಲಿ
ಎಲ್ಲರು ತನ್ನವರು ಎಂಬ ಭಾವದಿ
ಎಲ್ಲರ ಇಲ್ಲಿ ಕೂಡಿಸಿದೆ.
ಸಚ್ಚಿದಾನಂದ ಪ್ರಿಯ ಮಾತೆಯ ಕನಸು
ಬಸವ ಪಾದಕೆ ಅರ್ಪಿಸಿದೆ
ಸಾಧನೆಯ ಶಿಖರವ ಸೇರಿದ ಮೇಳವು
ಇತಿಹಾಸದಿ ತಾ ಮೆರೆಯುತಿದೆ.

– ಶಾರದಾ ಬಸವರಾಜ್, ರಾ.ಬ.ದಳ, ಭದ್ರಾವತಿ




ಪೀಠಾರೋಹಣ ಮಾಡಲಿರುವ ಪೂಜ್ಯ ಸ್ವಾಮೀಜಿಯವರಿಗೆ ಸ್ವಾಗತ



ವಿಧಾನ ಪರಿಷತ್ ಸದಸ್ಯರಾದ ಶರಣ. ದಯಾನಂದ ರೆಡ್ಡಿ ಅವರಿಂದ ಉದ್ಘಾಟನೆ



ಪೀಠಾರೋಹಣ ಮಾಡಿದ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದಸ್ವಾಮೀಜಿಯವರಿಗೆ ಪೂಜ್ಯ ಮಾತಾಜಿಯವರಿಂದ ರುದ್ರಾಕ್ಷಿ ಮುಕುಟಧಾರಣೆ



ರಾಮನಗರದ ಅಕ್ಕನಬಳಗದವರಿಂದ ಗುರುವಂದನೆ



ರಾಮನಗರದ ಶಾಸಕ ಶರಣ ರಾಜು ಅವರಿಗೆ ಸತ್ಕಾರ



ಶರಣೆ ಶಿವಮ್ಮನವರಿಗೆ ಸತ್ಕಾರ



ರಾಮನಗರದಲ್ಲಿ ಪೂಜ್ಯ ಶ್ರೀ ಮಾತೆ ಸತ್ಯಾದೇವಿಯವರಿಂದ
ಪ್ರವಚನ ಮುಕ್ತಾಯ ಸಮಾರಂಭ ದಿ. 8-6-2012

CPMG/KA/BGW/50/2012-2014, RNI 19980/70, POSTED AT MBC BANGALORE GPO
ON 3rd,10th,20th OF EVERY MONTH. LICENCED TO POST WITHOUT PRE PAYMENT
WPP-17, PAGES 32+4 (COVER PAGES)